ಅಪ್ಪಣೇ ಪ್ರಕಾರ ನಾನು ನೀಲಗಿರಿಯಿಂದ ತುಮಕೂರಿಗೆ ಬಂದೆನು, ಮತ್ತು ಸರ್ಕಾರದಿಂದ ನನಿಗೆ ಕೊಡಿಸಿರುವ ತಕಾವಿ ಎರಡುಸಾವಿರ ರೂಪಾಯಿ ವಗೈರೆ ವಿಷಯದಲ್ಲಿ ಸರ್ಕಾರಕ್ಕೆ ನಾನು ಬರೆದುಕೊಡಬೇಕಾಗಿರುವ ಮುಚ್ಚಳಿಕೆಯ ಮೂರು ಅಂಶಗಳನ್ನು ಒಂದು ಕಾಗದದಲ್ಲಿ ಬರೆದು ಮೈಸ್ಟರ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಗೆ ಕೊಟ್ಟೆನು. ಸುನಾವಣಿ ಆದನಂತರ ಅದರಲ್ಲಿ ಒಂದಂಶ ಮಟ್ಟಿಗೆ ನನ್ನಿಂದ ಬರೆಸಿಕ್ಕೊಂಡರು. ಅದನ್ನು ನೋಡಿದರೆ ಆ ಸಾಹೆಬರವರು ಅವ್ವಕ್ಕೆ ಪೂರ್ತಾ ನನ್ನಿಧಾನಕ್ಕೆ ತಿಳಿಸಿ ಮಾಡುವಹಾಗೆ ತೋರುತ್ತೆ. ಅವರಿಗೆ ನಾನು ಬರೆದು ತೋರಿಸಿದ ಅಂಶಗಳು ಈಕೆಳಗೆ ಅರಿಕೆ ಮಾಡಿರುತ್ತೇನೆ.

I. ಈ ಬಮ್ಮೇನಹಳ್ಳಿಯ ವಡದಿರುವ ಕೆರೆಯನ್ನು ಈ ಲಾಗಾಯತು ನಾಲ್ಕು ವರ್ಷ ಅಂದರೆ, ಸರ್ ೧೯೬೩ನೇ ಇಸವಿ ಆಕ್ಟೋಬರಿಗೆ ಕಟ್ಟ ಪೂರೈಸುತ್ತೇನೆ ಕಾಮಗಾರಿ ಬಾಕಿ ನಿಲ್ಲಿಸುವದಿಲ್ಲ.

II ಅನಂತರ ೧೯೬೪ನೇ ಇಸವಿ ಲಾಗಾಯತು ಅಂದರೆ, ಮಳೆಗಾಲ ಆಗಸ್ಟು ತಿಂಗಳಾರಭ್ಯವಾಗಿ ಕೆರೆಯಲ್ಲಿ ನೀರು ನಿಲ್ಲಿಸಿಕ್ಕೊಂಡು ಆ ನೀರಿನಿಂದ ಈ ಕೆರೇ ಹಿಂದಲ ಭೂಮಿಯಲ್ಲಿ ತರೀ ಸಾಗುವಳಿಗೆ ಆರಂಭಿಸಿ ಈ ಜಮೀರ್ಗಳಲ್ಲಿ ಬಹಳ ದಿವಸಗಳಿಂದ ಬಿದ್ದಿರುವ ಹಳ್ಳಿ ಕೊರಕಲುಗಳನ್ನು ೧೯೬೩ನೇ ಇಸವಿ ಆಕ್ಟೋಬರ್‌ನೊಳಗೆ ಮುಚ್ಚಿ ತರೀ ಸಾಗುವಳಿಗೆ ಕ್ರಮಪಡಿಸುತ್ತೇನೆ, ಜಮೀರ್ಗಳಲ್ಲಿ ಹಳ್ಳಿ ಕೊರಕಲುಗಳು ನಿಲ್ಲಿಸುವದಿಲ್ಲ.

III. ಆ ಕಾಲದೊಳಗೆ ಅಂದರೆ, ಈ ಲಾಗಾಯತು ೧೯೬೩ನೇ ಇಸವಿ ಆಕ್ಟೋಬರ್‌ನೊಳಗೆ ಡಿಟೋ ತಕಾವಿ ನನಿಗೆ ಕೊಟ್ಟರುವ ಎರಡುಸಾವಿರ ರೂಪಾಯಿ ಇದರ ಬಡ್ಡಿ ಸಹ ಮೈಸ್ಟರ್ ದಿವಾನ್ ಸಾಹೆಬರವರಿಂದ ನೇಮಕವಾಗಿರುವ ಖಿಸ್ತ್ರುಗಳ ಪ್ರಕಾರ ಸರ್ಕಾರಕ್ಕೆ ಪಾವತೀಮಾಡುತ್ತೇನೆ.

ಈ ವರತ್ತೆಗಳಿಗೆ ತಪ್ಪುವದಿಲ್ಲವೆಂತ ಬಗೆದು ಇದ್ದೆ. ಈ ಮೈಕಿ ಮೇಲಿನ ಒಂದಂಶ ಮಟ್ಟಿಗೆ ಬರೆಸಿಕ್ಕೊಂಡರು, ಬಾಕೀ ಎರಡಂಶಗಳನ್ನು ಬಿಟ್ಟರು.

ಮುಖ್ಯವಾಗಿ ಸ್ವಾಮಿಯವರ ಸನ್ನಿಧಾನದಲ್ಲಿ ಬೇಡುವದೇನಂದರೆ:—

ಸರ್ಕಾರದ ಕೆರೆಯ ದೆಸೆಯಿಂದ ನನ್ನ ಈಕೆರೆ ವಡದುಹೋಗಿ ನನಿಗೆ ೪ಸಾವಿರ ರೂಪಾಯಿಗಳು ನಷ್ಟವಾಯಿತು. ಈ ಕೆರೇ ಹಿಂದಲ ೪೫೩೬ ಎಕ್ರೆ ಭೂಮಿ ವಿಶಿಷ್ಟವ್ರೂ ೧೫ ವರ್ಷಗಳಿಂದ ಸಾಗುವಳಿ ಇಲ್ಲದೆ ತೀರಾ ಬಂಜರು ಇರುತ್ತೆ. ಮತ್ತು ಈ ಭೂಮಿಯಮೇಲೆ ವರ್ಷೇ ವರ್ಷೆ ನೀರಿನ ಪ್ರವಾಹ ನುಗ್ಗಿ ಅವರಿಂದ ನೆಲದ ಮಣ್ಣು ಕೊಚ್ಚಿಹೋಗಿ ಸಾಗುವಳಿಯ ಭೂಮಿಯಲ್ಲಿ ಹಳ್ಳ ಕೊರಕಲುಗಳು ಬಿದ್ದು ಸಾಗುವಳಿಗೆ ತೊಂದರೆ ಪಡಿಸಿರುತ್ತೆ. ಆದಾಗ್ಯೂ ನನ್ನ ಹಕ್ಕುದಾರಿಕೋಸ್ಕರ ಸರ್ಕಾರಕ್ಕೆ ಅರ್ಧ ಕಂದಾಯವನ್ನು ಕೊಟ್ಟರುತ್ತೇನೆ ಅದು ಸ್ವಾಮಿಯವರ ಚಿತ್ತಕ್ಕೆ ಗೊತ್ತು ಇರಬಹುದು.

ಈಕೆರೇ ಹಿಂದೆ ಅದೆ ೪೫೩೬ ಎಕ್ರೆ ಭೂಮಿಯಲ್ಲಿ ತರೀ ಸಾಗುವಳೀ ಮಾಡುವ ತರದೂದಿಗೋಸ್ಕರವೆ ಈಗ ಸರ್ಕಾರದಿಂದ ನನಿಗೆ ೨,೦೦೦ ರೂಪಾಯಿನ ತಕಾವಿ ಸಾಲ ಬಂತು. ಈಸಾಲದ ಜೊತೆಗೆ ಇದರಬಡ್ಡಿ ೭೫೦ ರೂಪಾಯಿ ಸೇರಿಕ್ಕೊಂಡು ಒಟ್ಟಗೆ ಸರ್ಕಾರಕ್ಕೆ ೨,೭೫೦ ರೂಪಾಯಿನ ಬಾಕೀದಾರನಾಗಿದೇನೆ. ಈ ಮೊಬಲಗನ್ನು ಈ ಲಾಗಾಯತು-ಒಂಭತ್ತು ವರ್ಷ ಅಂದರೆ, ೧೯೬೩ನೇ ಇಸವಿ ಆಕ್ಟೋಬರ್‌ನೊಳಗೆ ನನ್ನಿಧಾನದಿಂದ ನೇಮಕವಾಗಿರುವ ಖಿಸ್ತ್ರುಗಳ ಪ್ರಕಾರ ಸರ್ಕಾರಕ್ಕೆ ನಾನು ಪಾವತೀ ಮಾಡಬೇಕಾಗಿದೆ ಅದಕ್ಕೆ ತಪ್ಪಲಾರೆನು.

ಈ ಜಮೀರ್ಗಳಲ್ಲಿ ಹಿಂದೆ ೧೫ ವರ್ಷಗಳಿಂದ ಇದುವರಿವಿಗೆ ಯಾವ ಬೆಳೆಯೂ ಆಗಲಿಲ್ಲ ಎಂಬುವದನ್ನು ಸರ್ಕಾರದ ಲೆಕ್ಕ ವಗೈರೆ ದಾಖಲೇಯಿಂದ ವರಾಂಬರಿಸಬಹುದು.

ಮುಂದೆ ೧೯೬೩ನೇ ಇಸವಿ ಆಕ್ಟೋಬರ್‌ವರಿಗೆ ಈ ಕೆರೆಯನ್ನು ಕಟ್ಟಿಸುವ ಕೆಲಸವೇ ನನಿಗೆ ಹಿಡಿಯುತ್ತೆ. ಅನಂತರ ೧೯೬೪ನೇ ಇಸವಿ ಆಗಸ್ಟ್ ಸೆಪ್ಟಂಬರ್ ತಿಂಗಳಿಗೆ ಮಳೆಗಾಲದಲ್ಲಿ ಕೆರೆಗೆ ಬರುವ ನೀರು ನಿಲ್ಲಿಸಿಕ್ಕೊಂಡು ಆ ನೀರಿನ್ನಿ ಆಸರೆಯಿಂದ ಕೆರೇ ಹಿಂದಲ ಜಮೀರ್ಗಳಲ್ಲಿ ತರೀ ಸಾಗುವಳಿಗೆ ಆರಂಭಿಸಬೇಕು. ಈ ೪೫೩೬ ಎಕ್ರೆ ಭೂಮಿಯಲ್ಲಿ ಬಹಳ ದಿವಸದಿಂದ ಹಳ್ಳ ಕೊರಕಲು ಬಿದ್ದು ತರೀ ಸಾಗುವಳಿಗೆ ಅಡ್ಡಿಯಾಗಿರುವದರಿಂದ ಅದನ್ನೆಲ್ಲ ೧೯೬೩ನೇ ಇಸವಿ ಆಕ್ಟೋಬರ್‌ನೊಳಗೆ ಡಿಟೋ ಹಳ್ಳ ಕೊರಕಲುಗಳನ್ನು ಮುಚ್ಚಿ ತರೀ ಸಾಗುವಳಿಗೆ ಕ್ರಮಪಡಿಸುವ ಕೆಲಸವೇ ನನಿಗೆ ಹಿಡಿಯುತ್ತೆ.

ಈ ಕಾರಣಗಳಿಂದ ಈ ಲಾಗಾಯತು ೧೪೯೩ನೇ ಇಸವಿ ವರೆವಿಗೂ ಡಿಟೋ ೪೫೩೩ ಎಕ್ರೆ ತರೀ ಭೂಮಿಯಲ್ಲಿ ನನಿಗೆ ನಿಜವಾದ ಫಲ ಸಂಧಿಸಲಾರದು. ಅಥವಾ ಅಲ್ಪಸ್ವಲ್ಪ ಫಲ ಬಂದಾಗ್ಯೂ ಸ್ವಾಮಿಯವರ ಅಪ್ಪಣೇ ಪ್ರಕಾರ ಸರ್ಕಾರಕ್ಕೆ ಕೊಡಬೇಕಾಗಿರುವ ಖಾತೀಯನ್ನು ಕ್ರಮವಾಗಿ ವಾಷ್ತೀ ಮಾಡುವದೇ ನನ್ನ ಸುಖಸವಾಗಿರುತ್ತ. ೧೪೯೩ನೇ ಇಸವಿ ಆಖೈರಿನೊಳಗೆ ಡಿಟೋ ಬಾಕಿ ವಾವತೀ ಮಾಡುವವರಿಗೂ ನಾನೆ ಯಾವ ಬಿಳಿಯ ಧಾಯಿದೆಯೂ ಕಾಣಲಾರೆನು. ಡಿಟೊ೪೫೩೩ ಎಕ್ರೆ ಭೂಮಿಗೆ ತರೀ ಬಂಜರು ಕಂದಾಯ ಕೊಡುವದಕ್ಕೆ ಆಗುವದಿಲ್ಲ, ಆದಾಗ್ಯೂ ನನ್ನ ಹಕ್ಕು ದಾರಿಗೋಸ್ಕರ ಅರ್ಧ ಕಂದಾಯವನ್ನು ಸರ್ಕಾರಕ್ಕೆ ಕೊಡುತ್ತೇನೆ. ಬಾಕೀ ಅರ್ಧ ಕಂದಾಯದ ಮಟ್ಟಿಗೆ ಈ ಲಾಗಾಯತು ೧೪೯೩ನೇ ಇಸವಿ ಆಖೈರಿವರಿಗೆ ರಿಮಿಷನ್ ಕೊಡಿಸಬೇಕೆಂಬದಾಗಿ ಬೇಡುತ್ತೇನೆ, ದಯವಾಡಿ ನಡೆಸುವದು ಸರ್ಕಾರಕ್ಕೆ ಯುಕ್ತವಾಗಿದೆ.

ಈವಿಚಾರದಲ್ಲಿ ಪದೇ ಪದೆ ಸ್ಥಳದಲ್ಲಿ ಸರ್ಕಾರದವರು ವಸೂಲೀ ಕ್ರಮ ಜರಿಗಿಸುವದರಿಂದ ನನಿಗೆ ತುಂಬಾ ಕಷ್ಟವಾಗಿದೆ. ಈ ಕಷ್ಟ ಪರಿಹರಕ್ಕೋಸ್ಕರ ಸ್ವಾಮಿಯವರ ಶ್ರೇಯಃಪ್ರಾರ್ಥನೆ ಮಾಡಿಕ್ಕೊಂಡು ಸನ್ನಿಧಾನದಲ್ಲಿ ಕಾವು ಇದ್ದೇನೆ.

ಈ ವಿಚಾರವಾಗಿ ಸರ್ಕಾರದಲ್ಲಿ ಪದೇ ಪದೆ ನಾನು ಬೇಡಿಕೊಳ್ಳುವ ಕೆಲಸವಿಲ್ಲದ ಹಾಗೆ ಈ ಲಾಗಾಯತಿನಿಂದ ೧೪೯೩ನೇ ಇಸವಿ ಆಖೈರ್ ವರಿಗೆ ಡಿಟೋ ೪೫೩೩ ಎಕ್ರೆ ಭೂಮಿಗೆ ಅರ್ಧ ಕಂದಾಯ ರಿಮಿಷನ್ ಬಗ್ಗೆ ಅಪ್ಪಣೆ ಕೊಡಿಸಿ ನನ್ನನ್ನು ಕಾಪಾಡಬೇಕು, ಸ್ವಾಮಿ.

KANNATIC PRESS, BANGALORE—1893.

The statement showing the amount I have to remit to the Government for the years 1889 to 1897, and the remission I beg of the Government.

No. of years.	Years.	My estate behind the Bommanhally Tank.	The yearly rent I have to pay for my estate behind the Bommanahally Tank.	The yearly payment of the *interest* with the amount I have to return to the Government for the sum of Rs. 2,000.			The remission I beg of the Government in the corresponding years.
				Amount.	Interest	Total.	
		Acres. Gun. Yds.	Rs. As. P.				Rs. As. P.
1	1888—89	43—36—64	65—10—0	...	100	100	32—13—0
2	89—90	43—36—64	65—10—0	...	100	100	32—13—0
3	90—91	43—36—64	65—10—0	...	100	100	32—13—0
4	91—92	43—36—64	65—10—0	...	100	100	32—13—0
5	92—93	43—36—64	65—10—0	200	100	300	32—13—0
6	93—94	43—36—64	65—10—0	300	90	390	32—13—0
7	94—95	43—36—64	65—10—0	400	75	475	32—13—0
8	95—96	43—36—64	65—10—0	500	55	555	32—13—0
9	96—97	43—36—64	65—10—0	600	30	630	32—13—0
		Total ...	590—10—0	2,000	750	2,750	295— 5—0

(General Serial No. 32.)

1890.

No. 1652 L.Q. 64 of 88-89

Name of Petitioner. Ramiyengar.

Village. Mayasamudra.

Taluk. Thirthahalli.

District. Tumkur.

Date of Arzi. 1-11-89.

Date of Receipt. 1-11-89

Date of Disposal.

No. of Enclosures. 2.

20/3/90.
Submitted
AGP

Sheriff
Prepare a
precis of this
file
Atto
20/3

ABSTRACT.

That Dewan Bahadur's order
No. 2242. dated 23-11-87. on the
petitioner's application no
dated 4th-11-87. Concerning
the land survey No. 150.
under the tank of Mayasa
mudra is unjust.

2. Consonant to the Sugges-
tions and encouragements
of late Mr. Prase Dy. Comm.
Deputy Commissioner
the petitioner raised a
garden consisting of
600 plantain, Cocoanut
and fruit, paying yearly
Bagar assessment
of Rs. 18-8-0. for 7 years.

960

3 That unfortunately to him, the tank bund being breached his land and house were seriously damaged, whereupon the Government resumed it without his resignation.

4. That though he reminded asked for it in 1885. he was answered in the negative.

5 Prays that either permission to repossess the said land may be granted or Compensation of Rs 750, for the Cost of preparation of land and labor, may be awarded

8 annas Stamp.

J. Ramanathan Rau

ಮೈಸೂರು ಶ್ರೀಮತ್ ಮಹಾರಾಜ ರಾಜಾ ಸಾಹೇಬ್ ಬಹದ್ದೂರವರ ದೀವಾನ್
ಸ್ವಾಫೀಬರ್ಹವರು ಕೆ. ಶೇಷಾದ್ರಿ ಐಯ್ಯರ್ ಯಸ್ಕೊಯರ್ ಬಿ. ಎ., ಬಿ. ಎಲ್.,
ಸಿ. ಎಸ್. ಐ., ಯವರ ಸನ್ನಿಧಾನಂಗಳಿಗೆ.

ತಿಬಟೂರು ತಾಲ್ಲೂಕು ಮಾಯಿಸಮುದ್ರದ ರಾಮೈಯ್ಯಂಗಾರ್ರು ಕೃತಪಡಿಸುವದೇನೆಂದರೆ-ಸ್ವಾಮಿ.

ಈ ಮಾಯಿಸಮುದ್ರದ ಕಸಬಾ ಕೆರೆ ಹಿಂದೆ ನನ್ನ ೧೫೦ನೇ ನಂಬರು ಜಮೀನು ವಿಷಯದಲ್ಲಿ ಸ್ವಾಮಿಯವರು ಕೊಟ್ಟಿರುವ ತಾ ೨೬-೧೧-೪೭ನೇ ಮಕ್ಕಂ ೨೦೮೭ನೇ ನಂಬರು ಇಂಡಾರ್ಸ್ಮೆಂಟು ಅನ್ಯಾಯವಾಗಿ ಇದೆ. ಆ ಆರ್ಡರ್ ಕ್ಯಾನ್ಸಲ್ ಆಗಿ ೪೭-೧೧-೪ಲ್ಲು ಸನ್ನಿಧಾನಕ್ಕೆ ನಾನು ಕೊಟ್ಟಿರುವ ಅರ್ಜಿಯನ್ನೆ ರಿವ್ಯೂಮಾಡಿ ನ್ಯಾಯವಾದ ಫೈಸಲ್ ಅಪ್ಪಣೆ ಆಗಬೇಕೆಂತ ನೀಲಗಿರಿ ಪೊಕ್ಕಾಂನಲ್ಲಿ ತಾರೀಖು ೪-೫-೪೪ ಲ್ಲು ಸನ್ನಿಧಾನಕ್ಕೆ ಅರ್ಜಿ ಕೊಟ್ಟೆ. ಡಿಸ್ಟ್ರಿಕ್ಟ್ನಿಂದ ರಿಕಾರ್ಡ್ ತರಿಸಿ ನೋಡಿ ಹುಕುಂ ಕೊಡುವದಾಗಿ ಆಜ್ಞೆಯಾಯಿತು. ಅದು ಕ್ರಮ ಜರಿಗಿ ಫೈಸಲ್ ಅಪ್ಪಣೆ ಆಗಲಿಲ್ಲ, ಆದ್ದರಿಂದ ಈಗ ಕೃತಪಡಿಸಿ ಇರುತ್ತೇನೆ.

ಈಗ ಮುಖ್ಯವಾಗಿ ಸ್ವಾಮಿಯವರನ್ನ ಬೇಡುವದೇನೆಂದರೆ :—

೧. ಈ ೧೫೦ನೇ ನಂಬರು ಜಮೀನಿಗೆ ತುಮಕೂರು ಡಿಸ್ಟ್ರಿಕ್ಟ್ ಡಿಪ್ಟ್ರೀ ಕಮೀಷನರ್ ಮೆಸ್ಟರ್ ಸಿ. ಪರಸ್ವಾಹೇಬರವರ ಪ್ರೋತ್ಸಾಹಿಕೆಗೆ ನಾನು ಪಪ್ಪಿ ಆ ಪ್ರಕಾರ ಭೈವಪೈರಿನ ಬಾಗಾಯಿತು ಮಾಡುವದಕ್ಕಾಗಿ ವರುಷಂಕ್ಕೆ ೧೪III ರೂಪಾಯಿ ಪ್ರಕಾರ ೭ ವರುಷಕಾಲ ಸರಕಾರಕ್ಕೆ ಬಂಜರು ಕಂದಾಯವೆ ಕೊಟ್ಟೆ, ಆ ೭ ವರುಷಕಾಲದಲ್ಲಿ ಕೂಡಿದಷ್ಟು ಮೊಬಲಗು ವೆಚ್ಚಮಾಡಿ ತುಂಬಾ ಮಿಹನತ್ತಿನಿಂದ ಜಮೀನು ಸಾಗುವಳಿಗೆ ಕ್ರಮವಡಿಸಿ ೬೦೦ ಬುಡಬಾಳೇಗಿಡ ವಗ್ಯೆರೆ ನೆಡಿಸಿ ಇದ್ದೆ. ಅಗ್ಯೆ ೬೦೦ ರೂಪಾಯಿನ ಇಳಭೋಗ್ಯಕ್ಕೆ ಸವಾಲ್ ಬಂದುಯಿತ್ತು. ಆ ಕಾಲದಲ್ಲಿ ದೈವಗತಿಯಿಂದ ೧೪೦ನೇ ಇಸವಿಯಲ್ಲಿ ಈ ಮಾಯಿಸಮುದ್ರದ ಕೆರೆಯು ಈ ೧೫೦ನೇ ನಂಬ್ರರು ಜಮೀನು ಬಳ್ಳೀಲೂ ಮತ್ತು ನನ್ನ ವಾಸಮಾಡುವ ಮನೆಯಮೇಲೂ ಸಹಾ ಬಹಳವಾಗಿ ಪಡದುಹೋಯಿತು ಈ ಪ್ರವಾಹದಿಂದ ನನಿಗೆ ತುಂಬಾ ಫಸ್ಟ್ ಸಂಭವಿಸಿರುವದು ಸ್ವಾಮಿಯವರಿಗೆ ಗೊತ್ತಿರಬಹುದು. ಆ ಮಾಢಣಿವರುಷ ಡಿಟೋ ಜಮೀನಿನಲ್ಲಿ ತೆಂಗಿನಗಿಡ, ಅಡಿಕೆಗಿಡ ವಗ್ಯೆರೆ ನೆಡಿಕಿ ಅಭಿವೃದ್ಧಿಪಡಿಸುವದಕ್ಕೆ ಅಡ್ಡಿಯಾಗಿ ಬಿದ್ದಿನ್ನ ತಾಲೂಕ್ಕು ಮತ್ತು ಡಿಸ್ಟ್ರಿಕ್ಟ್ ಸರಕಾರದವರು ಪಕ್ಷಪಾತದಿಂದ ನನ್ನ ಖಾತೆಗೆ ಅನ್ಯಾಯದಿಂದ ಆ ಡಿಟೋ ಜಮೀನು ವಜಾ ಮಾಡಿಸಿರುತ್ತಾರೆ ಅದು ಅಕ್ರಮ.

೨. ಈ ಜಮೀನಿಗೆ ಸ್ವಾಮಿಯವರ ಅಪ್ಪಣೆ ಪೇರಿಗೆ ೧೪೪೫ನೇ ಇಸವಿಯಲ್ಲಿ ತಾಲ್ಲೂಕಿನಲ್ಲಿ ಪುನಶ್ಚ ದರಖಾಸ್ತು ಮಾಡಿದೆ. ೧೪೪೦ನೇ ಇಸವಿಯಲ್ಲಿ ಡಿಪ್ಟ್ರೀಕಮೀಷರ್ರವರಾದ ಮೆಸ್ಟರ್ಸುಬ್ಬಾಯರವರು ಮಾಡಿದ್ದ ಆರಡರನ್ನೇ ಅಂಗೀಕರಿಸಿದರು. ಆದರಿಂದ ಡಿಟೋ ಜಮೀನುನನಿಗೆ ದೊರಿಯಲಿಲ್ಲ. ಇದು ೧೪೩೫ನೇ ಇಸವಿಯಲ್ಲಿ ಅಮಲ್ದಾರ್ ಭೀಮರಾವ್ರು ಪಂತರು ಮಾಡಿರುವ ಆರಡರಿಗೆ ನಾನು ರುಜು ಮಾಡಿರುತ್ತೇನೆ. ಅಕ್ಷಕ್ಕೆ ವಿರೋಧವಾಗಿರುತ್ತೆ. ಈ ಜಮೀನಿಗೋಸ್ಕರ ನಾನು ವೆಚ್ಚಮಾಡಿರುವ ಮೊಬಲಗು ನನ್ನ ಮಿಹನತ್ತು ಸಹಾ ವ್ಯರ್ಥವಾಗಿರುವ್ದಲ್ಲದೆ ಈ ಜಮೀನಿಗೋಸ್ಕರ ಬಿಳಕಿಕ್ಕೊಂಡಿರುವ ತೆಂಗು ಅಡಿಕೆಗಿಡ ವಗ್ಯೆರೆ ಸೊಸಿಗಳು ವಟ್ಟುನಲ್ಲಿ ನಿಪ್ಪ್ರಯೋಜನವಾಗಿರುತ್ತೆ. ಅದನ್ನ ಅಭಿವೃದ್ಧಿಪಡಿಸುವದಕ್ಕೆ ಸ್ಥಳವಿಲ್ಲವಾಗಿದೆ.

೩. ಈ ಜಮೀನು ಪೊದರಿನಂತೆ ಭೈವಪೈರಿನ ಬಾಗಾಯಿತು ಮಾಡಿಕ್ಕೊಳ್ಳುವದಕ್ಕೆ ನನಿಗೆ ಖಾಯಂ ಮಾಡಿಕಿಕೊಡಬೇಕು.

೪. ಈ ಜಮೀನು ನನಿಗೆ ಕೊಡಿಸಬಾರದೆಂಬ ನ್ಯಾಯ ಸ್ವಾಮಿಯವರಿಗೆ ತೋರಿದಪಕ್ಷಕ್ಕೆ ಅದಕ್ಕಾಗಿ ಇದುವರಿಗೆ ನನಿಗೆ ಸಂಭವಿಸಿರುವ ನಷ್ಟ ೭೫೦ ರೂಪಾಯಿನ ಕಂಪೆನ್ಸೇಷನ್ ನನಿಗೆ ಕೊಡಿಸಿಕ್ಕೊಡಬೇಕು.

ಈ ವಿಷಯದಲ್ಲಿ ನ್ಯಾಯ ಪರಾಂಬರಿಸಿ ಸ್ವಾಮಿಯವರು ದಯವಿಟ್ಟು ಫೈಸಲ್ ಅಪ್ಪಣೆಕೊಡಿಸಿ ನನ್ನನ್ನು ಕಾಪಾಡಬೇಕ್ಕು-ಸ್ವಾಮಿ,

ತಾ. ೧೫-೯-೪೮
ಬೆಂಗಳೂರು.

(General Serial No. 30.)

GOVERNMENT OF MYSORE

189

From

To The Dy. Commissioner
Tumkur Distt.

Dated 23rd July 1890
Despatched 24
Received

Enclosures No.

General No. 3789
No. 135

His Letter No. 227 dated 14th August 1889, regarding work done by Ramiengar for Nagasandra tank towards the repair of the Bommena-halli tank for which purpose an advance of Rs 2000 was sanctioned by Govt in Pro: No. 999/25 87 7th May 1888.

Referring to the above, enquires whether Ramiengar has paid the first two years instalments amounting to Rs 200 with interest due thereon, as prescribed in the Pro. of 7th May 1888

(General Serial No. 26.)

263

1890.

OFFICE OF THE
3956
2 - AUG. 90
227
DEWAN OF MYSORE.

From

The Dy Commissioner
Tumkur District

I.A. 64-88-7

(757)

(89)

To

The Chief Secretary to the ~~Dewan~~
Government of Mysore.
Bangalore

Await for R
report on the
Ryots
as
1/8/90

Dated 29th July 1890.

Despatched

Received

Enclosures No.

General No. _____ 1890-91.
No. 227

His Docket No. 3789/135
Dated 23d Instant.

Has the honor to state in reply that Ramiengar of Hagavadra has not as yet paid the 2 years' instal= =ments due by him towards the repayment of the advance of Rs 200/ made to him under the Takkavi rules and that steps have

have been taken for their recovery
with interest by coercive measures.

2/11/264.

Yours obedient servant,
Commissioner.
Limuru District

Feb

(Genl. Cl. No. 82.)
1890

1183

Name of Petitioner. N. Rama Iyengar

Village. Mayasandra

Taluk. Sidlaghatta

District. Tumkur

Date of Arzi. 21-8-90

Date of Receipt

Date of Disposal.

No. of Enclosures. A to F

Submitted
21/8/90

ABSTRACT.

Prays that early orders may be passed on his former petition relating to (a) his Jodi and Khalsa lands (b) his tank at Bommenahally (c) his land No 150 lying under Mayasandra Tank and (d) his land Survey No 222 lying under Mayasandra Tank

Separate these
General parts from
the Petitioners prays
Separate orders
as noted on the
annexed Separate
papers

23/5/91

To

T. R. A. THUMBOO CHETTY Esquire,
Officiating Dewan to His Highness the
Maharaja of Mysore.

The Humble Memorial of N. Rama Iyengar, residing at Mayasandra, Turuvekere Sub-Taluk, Tiptoor Taluk.

RESPECTFULLY SHOWETH,

That Memorialist submitted to the Dewan K. Seshadri Iyer Esquire, on the 4th November 1887, a Memorial touching the following four points.

(*a*) His Jodi and Khalsat lands.
(*b*) His tank at Bommenahally.
(*c*) His land No. 150 lying under Mayasundra tank.
(*d*) His land Survey No. 222 lying under Mayasundra tank.

2. That Memorialist received on the 23rd November 1887, an acknowledgement No. 2224 to the above mentioned Memorial.

3. That in accordance with the terms of that acknowledgement, Memorialist has been waiting for a settlement of his case, having paid to the Dewan two visits on the Nileghiries with respect to the same, and having been informed by him that he would send for Memorialist's papers from the District office and pass orders thereon.

4. That one day last year Memorialist paid his respects to the Dewan in Darbar and he was pleased to tell Memorialist that his papers had come from the District office and final orders would be passed thereon.

5. That Mr. Seshadri Iyer was pleased to remark incidently to yourself as well as to Mr. Vijayendra Rao, that Memorialist had suffered much loss in his case and had been fighting for it since he was Deputy Commissioner of Tumkur although cases very similar to that of Memorialist had been decided.

6. That owing to delay in passing final orders from Huzur, Memorialist has had to suffer much from the high handed proceedings of the Taluk and Engineering authorities in respect of,—

(1) his lands at Mayasundra, even to the extent of Memorialist being deprived of them;
(2) his Ancestral Chatrum and its compound;
(3) the Avenue Trees planted by him on roads leading from Seera to Mysore and from Tiptoor to Bangalore;—matters to which, Memorialist begs leave to draw your attention, in enclosures marked A and F.

7. That Memorialist has taken the liberty of enclosing herein, a Canarese Memorial together with six statements marked A. B. C. D. E. and F.—setting out in detail the injustice done to him and respectfully prays that you may be graciously pleased to take his case into early consideration and restore him to his rights.

For which act of kindness, Memorialist shall, as in duty bound,

EVER PRAY.

No. 2247 L.R. 64-88-9

Endorsement

In reply to his petition dated 4th November 1887.

Kamiengas of Krayasandra, Sipkur taluk is informed that the case having already been disposed of by orders dated 17th May 1887 based upon the written statement of Petitioner dated 4th October 175 there are no grounds whatever for a review of those orders. Petition is accordingly rejected. The enclosure is returned.

Mysore Dewanni Office
Petition Dept.
19/23 Nov. 87

"Signed"
By order
P. Vijayendra Rao
Chief Secretary

267

L.A. 64-88-10

To

T.R.A. Tamboochelly Esquire
Officiating Dewan
Government of Mysore

Humble memorial of M. Ramaiengar of Mayasamudra Tarnekare Sub Talaq

Respectfully Sheweth

(1) That on 21-8-90 Memorialist submitted to Your Honour a petition for favourable consideration, ranging his complaints under 6 separate heads A, B, C, D, E, F.

2. That regarding Complaint under the head C, Memorialist beg Your Honour will be graciously pleased to pass orders, before complaints under other heads are taken up for consideration; in directions to the Talaq authorities to stop their proceedings in that matter, pending Your Honours consideration of the same.

3 That Memorialist begs leave to draw Your attention to his complaint under the head C, hereunder set out in detail:

For the 2000 Rs lent to Memorialist for reconstructing his breached tank at Bommanahalli village Government has secured his land of 43-34-64 acres and also his godi village worth 4000 Rs in the Kunigal Talaq. This land has been in Kunjer for these 15 years. Government has remissioned Kandayam on this land for the years Yauwa and Dhatu for 4 years from Iswara to Sarwajita, Memorialist has paid half Kandayam to keep up his rights over this land, the other half being remissioned

For the years Sarwadhari and Virodhi half Kandayam has been paid by him, and the other half for those years, Memorialist has not paid, pending your Honour's compliance with his prayer for its remission. The injustice done him by the Taluq authorities in this matter, is

(a) that the Kandayam of Rs 34-13-n, paid by Memorialist for the year Virodhi, instead of being duly credited for that year, has been credited for the year Sarwadhari; this paid-up Kandayam being made by them to lie in arrear for the year Virodhi, and the land of 3-34-64 acres being attached for this arrear; while that land itself is secured by Government for the loan of 200Rs granted to Memorialist, this loan being repayable by the end of the year 1897. Memorialist therefore prays that Your Honour may be graciously pleased to grant him remission of this half Kandayam for this land till the end of the year 1897 and to direct the Taluq authorities, to levy only the other half, stopping their proceedings in respect of attachement &c.

(b) That, as per endorsement given to Memorialist, No 91 dated 16-5-88, interest upon the amount of 200Rs lent him, being only 10oRs per annum, the loan having been made on 28-10-'88, and the interest for the year 28-10-'89 amounting only to 10oRs, the Taluq Authorities have issued to the memorialist a notice dated 10-5-90, calling upon him to pay 200Rs for interest, which amount will be wholly due by him on 28-10-90. Memorialist has nevertheless deposited 200Rs in the Kanigal Taluq Treasury, and begs your Honour will be graciously pleased to direct the Taluq Authorities to call for 10oRs alone from him and 200Rs.

4. That the tank of Memorialist could not have breached but for the breaching of the Government tank. He was properly entitled to adequate compensation for the damage done to his tank which it had cost him

4000 Rs to Construct. Instead of compensation, he has been granted a loan of 2000 Rs to repayable in 9 years by instalments, and the damage done him thereby remains virtually unredressed. He begs that in consideration of his great losses in respect of this matter, Your Honour will be graciously pleased to permit him to pay only half the amount of interest that is now ordered to be paid by him; as otherwise he virtually gets nothing for the damage done to his tank by the breaching of the Government tank

5. That the memorialist as in duty bound ever prays.

Bangalore
29 August 90

(78)

(84)

ಮೈಸೂರು ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರವರ ದೀವಾನ್ ಸಾಹೇಬರು
ಕೆ. ಶೇಷಾದ್ರಿ ಐಯರ್ ಯಸ್ಕ್ವಯರ್, ಬಿ. ಎ., ಬಿ. ಯಲ್.,
ಸಿ. ಯಸ್. ಐ., ರವರ ಸನ್ನಿಧಾನಕ್ಕೆ.

ತುಮಕೂರು ಡಿಸ್ಟ್ರಿಕ್ಟ್ ತುರುವೇಕೆರೆ ಸಬ್‌ತಾಲ್ಲೂಕು ಮಾಯಿಸಮುದ್ರದ ರಾಮೈಯ್ಯಂಗಾರ್ರು ಕೃತಜ್ಞತೆ ತಿಳಿಸುವದೇನಂದರೆ—ಸ್ವಾಮಿ, ಸಂಸ್ಥಾನದಲ್ಲಿ ಎಲ್ಲಾ ಜಹಗೀರ್‌ದಾರ್ ಪ್ರಜೆಗಳನ್ನು ಪಂದೇ ಖಾಯಿದೆಯಲ್ಲಿ ಆಳುತ್ತಾ ಅವರುಗಳ ಕ್ಷೇಮವನ್ನು ಪರಾಂಬರಿಸುವದಾಗುತ್ತೆ. ತುಮಕೂರು ಡಿಸ್ಟ್ರಿಕ್ಟ್ ಸರಕಾರದಲ್ಲಿ ನನ್ನ ವಬ್ಬನ ಮಟ್ಟಿಗೆ ವಂದು ಖಾಯಿದೆಯಲ್ಲಿ ಆಳುತ್ತಾರೆ, ಅದನ್ನ ಅವರು ನೋಡಿರುವದಿಲ್ಲ. ದಯಾಳುವಾದ ಸ್ವಾಮಿಯವರು ಪರಾಂಬರಿಸುವದಕ್ಕಾಗಿ ಈ ಕೆಳಗೆ ೬ ಸಂಗತಿಗಳನ್ನು ಅರಿಕೆ ಮಾಡಿರುತ್ತೇನೆ. ಘನವಾದ ಚಿತ್ತದಲ್ಲಿ ಲಾತಿಸಿ ನ್ಯಾಯವಾದ ಆಜ್ಞೆರು ಫೈಸಲು ಅಪ್ಪಣೆ ಆಗಬೇಕು.

ಈ ಮಾಯಿಸಮುದ್ರದ ಸಮ್ಮತಿನಲ್ಲಿ ನನಿಗೆ ಇರೆತಕ್ಕ ಸ್ಥಿರ ಸ್ವತ್ತುಗಳ ವಿವರ :—

	ರೂ.
೧. ಕಸಬಾ ಮಾಯಿಸಮುದ್ರದಲ್ಲಿರುವ ನಮ್ಮ ಛತ್ರ, ಅದರ ಕಾಂಪೌಂಡು ಜಾಗಾ ಸಹಾ. ಈ ಛತ್ರವನ್ನ ೧೮೫೭—೫೮ನೇ ಇಸವಿಯಲ್ಲಿ ಕಟ್ಟಿಸಿದ್ದಕ್ಕೆ ಖರ್ಚಾಗಿರುವದು ...	೪,೦೦೦
ಈ ಛತ್ರದ ಅನುಕೂಲಕ್ಕೂ, ಬಂದೋಬಸ್ತಿಗೂ ಸರಕಾರದವರ ಅಪ್ಪಣೆ ಪ್ರಕಾರ ಆಗಳತೆಯ ಹಳ್ಳಿದಲ್ಲಿ ಬೀರು ನಿಲ್ಲದೆ ಹಾಗೆ ಭರ್ತೀ ಮಾಡಿಸಿರುವ ಕಾಂಪೌಂಡು ಜಾಗಾಕ್ಕೆ ಖರ್ಚಾಗಿರುವದು	೧,೦೦೦
	೫,೦೦೦

೨. ಈ ಛತ್ರದ ನೀಪಾಸಾಧನೆ ಬಗ್ಗೆ ಸರಕಾರದಿಂದ ೧೮೫೮—೫೯ನೇ ಇಸವಿಯಲ್ಲಿ ಜಮೀನು ಅರತೆಮುಂಪ ಕಲ್ಲುಗಳನ್ನ ನೆಡಿಸಿ ನಮಿಗೆ ಜೋಡೀ ಇನಾಮಾಗಿ ಕೊಟ್ಟಿರುವ ೧೩—೧೩—೦ ಖಂಡಗ ಬೀಜವರಿ ನೆಲಕ್ಕೆ ೧೮೦—೫೬ ಎಕರೆ ಭೂಮಿ.

ಈ ಭೂಮಿಯನ್ನ ಸಾಗುವಳೀ ಮಾಡುವದಕ್ಕೋಸ್ಕರ ಡಿಟ್ಟೋ ಜಮೀನು ಮಧ್ಯದಲ್ಲಿ ನೂತನವಾಗಿ ವಂದು ಗ್ರಾಮವನ್ನ ಕಟ್ಟಿ ಅದರಲ್ಲಿ ಜನಗಳಿನ್ನೂ ದನಗಳನ್ನೂ ವಗ್ಯೈರೆ ಕಾಲಸಡೆಗಳ ಮಡಗಿಸಿದ್ದದ್ದಕ್ಕೆ ತಕಾವಿ ವಗ್ಯೈರೆ ಖರ್ಚಾಗಿರುವದು ೩,೦೦೦
೩,೦೦೦

೩. ಈ ಮಾಯಿಸಮುದ್ರದ ಸಮ್ಮತು ಬಮ್ಮೀನಹಳ್ಳಿಯಲ್ಲಿ ನನ್ನ ಸ್ವಂತ ಲಾಗವಡಿನ ಕೆರೆ :—
ಈ ಕೆರೆಗೆ ಸರಕಾರದ ಹುಕುಂ ಪ್ರಕಾರ ಮೊದಲುಸಲ ನನ್ನಸ್ವಂತ ಲಾಗವಡಿನಿಂದ ಕಾಮಗಾರಿ ಮಾಡಿಸಿದ್ದಕ್ಕೆ ೪,೦೦೦
ಈ ಕೆರೆಗೆ ಈಗ ಸರಕಾರದವರು ತಿಳಿದ ಹಾಗೆ ಎರಡನೇ ಸಲ ಕಾಮಗಾರಿ ನಡೆಯುತ್ತಾ ಇರುವದಕ್ಕೆ ೨,೦೦೦
೬,೦೦೦

೪. ಈ ಮಾಯಿಸಮುದ್ರದ ಕೆರೆ ಹಿಂದೆ ನಂಬರು ೧೫೦ನೇ ಬಾಗಾಯಿತು ಜಮೀನು :—
ಈ ಜಮೀನಿನಲ್ಲಿ ೧೮೫೯ನೇ ಇಸವಿಯಲ್ಲಿ ಬೂಳ ವಗ್ಯೈರೆ ನೆಡಿಸಿ ಬೆಳೆ ಮಾಡಿಸಿದಬಗ್ಗೆ ಖರ್ಚಾಗಿರುವದು ೨೫೦
೨೫೦

೫. ಈ ಮಾಯಿಸಮುದ್ರದ ಅಮಾನಿ ಕೆರೆ ಹಿಂದೆ ಹೊರ ಬೈಲಿನ ಹಂತದಲ್ಲಿರುವ ಗದ್ದೆ— :
ಡಿಟ್ಟೋ ಗದ್ದೆಗೆ ಸರ್ವೇ ನಂಬರು ೬೫೫, ಈ ಜಮೀನು ಖರೀದಿಗೆ ತೆಗದುಕ್ಕೊಂಡದ್ದಕ್ಕೆ :... ೧೫೦
೧೫೦

೬. ಈ ಮಾಯಿಸಮುದ್ರದಬಳೀಲಿ ರಸ್ತೆಗಳ ದುಬಾಜೂದಲ್ಲಿ ನಾನು ಹಾಕಿ ಬೆಳಸಿರುವ ಸಾಲುತೋಪು:—
ಸರಕಾರ್ದ ಹುಕುಂಪ್ರಕಾರ ದರ ಸೊಸಿಗಂಕ್ಕೆ ೨ ರೂಪಾಯಿನಂತೆ ೧,೦೦೦ ಸೊಸಿಗಳಿಗೆ ಖರ್ಚಾಗಿರುವದು ೨,೦೦೦
೨,೦೦೦
ಜುಂಲಾ...೧೬,೯೦೦

ಸರಕಾರದ ಅಪ್ಪಣೆಯನ್ನ ನಂಬಿ ಈ ಆರು ಆಸ್ತಿಗಳಿಗೋಸ್ಕರವಾಗಿ ಡಿಟ್ಟೋ ಮೊಬಲಗು ವೆಚ್ಚಮಾಡಿದೆ. ಈವುಗಳನ್ನ ವಳ್ಳೇ ಸ್ಥಿತಿಯಲ್ಲಿ ಮಡಗಿಕ್ಕೊಂತು ಇದ್ದು.

೧೪-೧೦-೧೯೦೯ ಇಸವಿ ನವೆಂಬರ್ ತಿಂಗಳಲ್ಲಿ ಒಂದುದಿವಸಸೂರ್ಯ ೧೨ ಘಂಟೆ ಸಮಯದಲ್ಲಿ ಜನವೆಲ್ಲಾ ಮಲಗಿದ್ದ ವ್ಯಾಳೆ ಅಕಸ್ಮಾತ್ತಾಗಿ ಈ ಮಾಯಿಸಮುದ್ರದ ಕೆರೆಯು ೭ ಭಾಗವಾಗಿ ಪಡದು ಹೊಯಿತು. ಆ ಪ್ರವಾಹದಲ್ಲಿ ನನ್ನ ಸಂಸಾರದ ಆಸ್ತಿ ವಗೈರೆ ಸಾಮಾನುಗಳು ಎಲ್ಲಾ ಕೊಚ್ಚಿ ಹೊಯಿತು. ಅವೇಪ್ರವಾಹದಲ್ಲಿ ಶಿಕ್ಕಿದ್ದ ನನ್ನ ಸಂಸಾರದ ಜನವೆಲ್ಲರೂ ದೇವರಕೃಪೆಯಿಂದ ಬದುಕಿಕೊಂಡರು ನಾನು ಬದುಕಿದೆ.

ಆ ಲಾಗಾಯಿತಿನಿಂದ ನನ್ನ ಈ ಆರು ಆಸ್ತಿಗಳ ವಿಷಯದಲ್ಲಿ ತಾಲ್ಲೂಕು ಸರಕಾರದವರು ಕೊಡಿದಷ್ಟಿಗೂ ಪಕ್ಷಪಾತ ನಡಿಸಿದರು, ಡಿಸ್ಟ್ರಿಕ್ಟ್ ಸರಕಾರದವರೂ ನ್ಯಾಯವನ್ನು ಪರಾಂಬರಿಸದೆ ತಮ್ಮ ತಾಬೇದಾರರು ನಡಿಸಿದ ಕಾರ್ಯವನ್ನೇ ಅಭಿಮಾನಿಸಿದರು. ಯಗ್ಜಿಕ್ಯೂಟಿವ್ ಇಂಜನೀಯರ್ ಸಾಹೇಬರು ತಮ್ಮ ಕೈಲಾದಷ್ಟಿಗೂ ಅತಿಕ್ರಮದಿಂದ ಕೆಲವು ಆಸ್ತಿಗಳನ್ನ ಅಂದರೆ ೧-೪ನೇದನ್ನ ಅಪಹರಿಸಿದರು, ಮತ್ತು ಕೆಲವು ಕಾಲದಒಳಕ ನನಿಗೆ ನಷ್ಟಬರುವಂತೆ ಕೆಡಕುಮಾಡಿರುತ್ತಾರೆ. ಈ ವಿಚಾರದಲ್ಲಿ ನಾನು ಸಿವಿಲ್ ವಗೈರೆ ಕೋರ್ಟುಗಳಲ್ಲಿ ಫಿರ್ಯಾದು ಮಾಡಲಿಕ್ಕೆ ಈಗ ನಿರ್ಧರಿಸಿಕನಾಗಿರುತ್ತೇನೆ.

ಸ್ವಾಮಿಯವರ ಸನ್ನಿಧಾನದಲ್ಲಿ ಫೈಸಲಾಗತಕ್ಕ ಬಗ್ಗೆ ಕೆಲವು ಸಂಗತಿಗಳಿಗೆ ತಾರೀಖು ೮-೧೧-೧೯೦೯ರಲ್ಲಿ ಅರ್ಜಿಗಳು ಕೊಟ್ಟಿದ್ದೆ. ಅದರಲ್ಲಿ ಒಂದು ಸಂಗತಿಮಟ್ಟಿಗೆ ಕೋಣಿಗಲ್ ತಾಲ್ಲೂಕಿನದು ಅದನ್ನ ಆಗಲೇ ಸ್ವಾಮಿಯವರು ಫೈಸಲುಮಾಡಿಸೋಣವಾಯಿತು. ಬಾಕಿ ನಾಲ್ಕು ಸಂಗತಿಗಳ ಅರ್ಜಿಗಳು ಈ ತಾಲ್ಲೂಕಿನದು-ಮೇಲೆ ಕಾಣಿಸಿರುವ ೨-೩-೧೦ ಈ ಸಂಗತಿಗಳ ಅರ್ಜಿಗಳನ್ನು ಫೈಸಲುಬಗ್ಗೆ ಡಿಸ್ಟ್ರಿಕ್ಟಿಗೆ ಕಳುಹಿಸಿರುವದಾಗಿ ತಾರೀಖು ೨೩-೧೧-೧೯೦೯ರಲ್ಲು ಎಂಬೆನೇ ನಂಬರು ಇಂಡಾರ್ಸು ಹುಕುಂ ಅಪ್ಪಣೆ ಆಯಿತು.

೨-೩ನೇ ಅರ್ಜಿಗಳ ವಿಚಾರದಲ್ಲಿ ಡಿಪ್ಟೀಕವಿಾಷನರ್ ಮೆಸ್ಟರ್ ಕ್ರಿಷ್ಣಮೂರ್ತಿಗಳವರು ನನ್ನ ಸಮಕ್ಷವು ವಿಚಾರಣೆಮಾಡಿ ಸ್ವಾಮಿಯವರ ಫೈಸಲುಬಗ್ಗೆ ಮೆಸ್ಟರ್ ಚೀಫ್ ಸೆಕ್ರಟರಿ ಸಾಹೇಬರವರಬಳಿಗೆ ರಿಪೋರ್ಟುಮಾಡಿಸಿ ಇರುತ್ತಾರೆ. ಆ ವಿಚಾರದಲ್ಲಿ ನನಿಗೆ ಫೈಸಲು ಅಪ್ಪಣೆ ಆಗಿರುವದಿಲ್ಲ. ಡಿಟೊ ೩ನೇ ಸಂಗತಿಯ ಅರ್ಜಿಯನ್ನು ಡಿಪ್ಟೀ ಕವಿಾಷನರ್ ಮೆಸ್ಟರ್ ಕ್ರಿಷ್ಣಮೂರ್ತಿಗಳವರು ತಮ್ಮ ಅಸಿಸ್ಟೆಂಟ್ ಜವಾಬಿಂದಿ ಆಫೀಸರವರಿಗೆ ಕಳುಹಿಸಿದವರು ಅವರು ಸಮಕ್ಷಮ ನೋಡಿ ನನ್ನ ವಿಚಾರಿಸದೆ ಪರೋಕ್ಷದಲ್ಲಿ ಅಮಲ್ದಾರ್ರವರ ಅಭಿಪ್ರಾಯದಂತೆ ೀರಾ ಅನ್ಯಾಯ ಮಾಡಿರುತ್ತಾರೆ. ಆ ವಿಚಾರದಲ್ಲಿ ನನ್ನ ಫಿರ್ಯಾದು ಮೇಲೆ ಮೆಸ್ಟರ್ ಕ್ರಿಷ್ಣಮೂರ್ತಿಗಳವರು ಸಮಕ್ಷಮ ತಾವೇ ಬಂದು ಫೈಸಲು ಮಾಡುವವರಿಗೂ ಇದ್ದಹಾಗೆ ಇರಲಿಯೆಂಬುದಾಗಿ ತಾಲ್ಲೂಕಿಗೆ ಹುಕುಂಕೊಟ್ಟರು. ಈ ಹುಕುಮಿನಂತೆ ಈವರಿಗೆ ಅಡ್ಡಿಯಾಗಿ ಇದ್ದದ್ದು ಮೆಸ್ಟರ್ ಕ್ರಿಷ್ಣಮೂರ್ತಿಗಳವರು ವರ್ಗವಾಗಿ ಬೇರೆ ಡಿಪ್ಟೀಕವಿಾಷನರವರು ಬರುವವರಿಗೂ ಈ ಕೇಸು ಅಡ್ಡಿಯಾಗಿತ್ತು. ಈಗ ಆ ಸಂಗತಿ ೀರಾ ಅನ್ಯಾಯವಾಗಿದೆ. ಈ ಸಂಗತಿಯಲ್ಲಿ ನನ್ನ ವಿಚಾರಣೆ ಆಗಲಿಲ್ಲ. ಡಿಟೊ ಜವಿಾನು ೩ ವರುಷಗಳಿಂದ ಗಿಳಿ ಮಾಡಿಸುವದಕ್ಕೆ ಯತ್ನಿಗೂ ಸಾಧ್ಯವಿಲ್ಲದೆ ಬಂಜರು ಇರುತ್ತೆ. ಆದಾಗ್ಯೂ ಡಿಟೋ ಜವಿಾನು ನನ್ನ ಹಕ್ಕುದಾರಿಗೋಸ್ಕರ ವರುಷಂಕ್ಕೆ ೨೬-೦-೦ ರೂಪಾಯಿಗಳ ಕಂದಾಯವನ್ನ ಸರಕಾರಕ್ಕೆ ನಾನು ಪಾವತಿ ಮಾಡಿಸಿ ಇರುತ್ತೇನೆ. ಈ ಫಿರ್ಯಾದಿಗಳ ವಿಚಾರದಲ್ಲಿ ಫೈಸಲು ಅಪ್ಪಣೆ ಆಗಲಿಲ್ಲ. (ಖಾಯಿಲೆ ಮನುಷ್ಯನಿಗೆ ಉಪರೋಗಕ್ಕೆ ಹೆಚ್ಚಿದಹಾಗೆ) ಸ್ಥಳದಲ್ಲಿ ನನಿಗೆ ಸರಕಾರದವರು ಪದೆಪದೆ ಅನ್ಯಾಯಗಳು ಮಾಡಿ ತಾವೆಗಳು ಸಹಾ ಹೆಚ್ಚಿಸುತ್ತಾರೆ.

ಈ ಫೈಸೂರು ಸರಕಾರವನ್ನು ನಮ್ಮ ಶ್ರೀಮಾನ್ ದೀವಾನಸಾಹೇಬರವರನ್ನು ಆಳುವ ಶ್ರೀಮನ್ಮಹಾರಾಜ ರಾಜಾನಸಾಹೇಬ ಬಹದ್ದರವರನ್ನು ಶ್ರೇಯಃಪ್ರಾರ್ಥನೆ ಮಾಡಿಕ್ಕೊಂಡು ಜೀವನಮಾಡುವ ನನಿಗೆ ನಿಾತಾಂಕೆಯಲ್ಲಿ ಸ್ವಾಮಿಯವರ ಶ್ರೇಯಃಪ್ರಾರ್ಥನೆಮಾಡುವದಕ್ಕೆ ಈ ಅರ್ಜಿಯಲ್ಲಿ ಕಾಣಿಸಿರುವ ೬ ಸಂಗತಿಗಳ ವಿಷಯದಲ್ಲಿಯೂ ನ್ಯಾಯವಿಚಾರಣೆಯಿಂದ ನನಿಗೆ ಫೈಸಲು ಅಪ್ಪಣೆಕೊಟ್ಟು ಕಾಪಾಡಬೇಕೆಂಬದಾಗಿ ಪ್ರಾರ್ಥಿಸುತ್ತೇನೆ.

ತಾರೀಖು ೬-೨-೧೯೧೦,
ಬೆಂಗಳೂರು.

೨ನೇ ಕಲಮಿನಲ್ಲಿ ಕಂಡಿರುವಬಾಬತು ಇನಾಂ ಟೈಟಲ್‌ಡೀತುಗಳು ... ... ೪.

೩ನೇ ಕಲಮಿನಲ್ಲಿ ಕಂಡಿರುವ ಬಾಬತು ಲಿಂಗೇಗೌಡನಿಂದ ಬರಸಿಕೊಂಡಿರುವ ಖರೀದಿ ದಸ್ತ್ರಾವಜು ೧.

ಈತನ ಹೆಂಡತಿ ರಂಗಮ್ಮನಿಂದ ಬರಸಿಕೊಂಡಿರುವ ಖರೀದಿ ದಸ್ತ್ರಾವಜು ... ... ೧.

ಸಹಾ ಪಟಾಂಬರಿಕೆಬಗ್ಗೆ ತಾರೀಖು ೪-೧೧-೧೯೦೯ರಲ್ಲು ಸ್ವಾಮಿಯವರ ಸನ್ನಿಧಾನಕ್ಕೆ ಅರ್ಜೀಸಂಗಡ ಕೊಟ್ಟರು ಪದನ್ನ ಪಟಾಂಬರಿಕೆಯಿಂದ ವಾಪಸು ಕೊಡಿಸಿಕೊಡಬೇಕು ಎಂಬದಾಗಿ ಬೇಡುತ್ತೇನೆ.

A

ಅರ್ಜಿಯ ೧ನೇ ಕಲಮಿನ ಪಿರ್ಯಾದ ಸಂಗತಿ.

ಈ ವಾಮಿಸಮುದ್ರದ ಊರು ಬಾಗಲಿಗೆ ಯಡಗಡೆ ಇದ್ದ ಕೋಟೆ ಗೋಡೆ ಮತ್ತು ಅಗಳತೆ ಹಳ್ಳ ಸಹಾ ಸರಕಾರವರು ನನಿಗೆ ೧೮೫೬-೫೭ನೇ ಇಸವಿಯೆಲ್ಲಿ ಕೊಡಿಸಿದರು. ಈ ಊರಿಗೆ ಬರುವ ನಾನಾಜಾತಿ ಮುಸಾಫರ್ ಜನರು ಸಾಖ್ಯದಲ್ಲಿ ಇಳಿದು ವಾಸಾಮಾಡಿ ಹೊರಟುಹೋಗುವದಕ್ಕೆ ಯೋಗ್ಯವಾದ, ದೊಡ್ಡದಾದ ಬಂದು ಛತ್ರ ನನ್ನ ೧೮೫೬-೫೭ನೇ ಇಸವಿಯೆಲ್ಲಿ ಕಟ್ಟಿಸಿದ್ದೆ. ಅದಕ್ಕೆ ೪,೦೦೦ ಸಾವಿರ ರೂಪಾಯಿ ಖರ್ಚಾಗಿರುತ್ತೆ.

೧೮೫೭-೫೯ನೇ ಇಸವಿಯೆಲ್ಲಿ ತುಮಕೂರು ಡಿವೀಜ್ಞ ಸೂಪರ್ಟೆಂಡೆಂಟ್ ಮೆಸ್ಟರ್ ಡಾಬಿಸ್ ಸಾಹೇ ಬರವರು ತಾಲ್ಲೂಕು ಜಮಾಬಂದಿ ಬಗ್ಗೆ ಅಲ್ಲಿಗೆ ಬಂದಿದ್ದವೇಳೆ ಸಮಕ್ಷಮ ನಮ್ಮ ಛತ್ರಕ್ಕೆ ಬಂದು ನೋಡಿ ಛತ್ರದ ಕಟ್ಟಿತವನ್ನ ಪಸಂದುಪಟ್ಟರು. ಈ ಛತ್ರದ ಹಿಂದೆ, ಪಕ್ಕದಲ್ಲಿ ಮತ್ತು ಮುಂದುಗಡೆಯಲ್ಲಿ ಸಹಾ ಅಗಳತೆ ಇರುವದು. ಈ ಅಗಳತೆ ಹಳ್ಳದಲ್ಲಿ ಯೊವಾಗಲೂ ನೀರು ನಿಂತುಕ್ಕೊಂಡು ನೀರಿನ ದುರ್ವಾಸನೆ ಥಂಡಿ ಹವಾ ಸಹಾ ಯೊವಾಗಲೂ ಬಲವಾಗಿರುವದು. ಅದನ್ನ ಸಾಹೇಬರವರು ನೋಡಿ ಈ ಹಳ್ಳವನ್ನ ಮುಚ್ಚಿಸಿ ಇಲ್ಲಿ ನೀರು ನಿಲ್ಲದ ಹಾಗೆ ಮಾಡಿಸಬೇಕೆಂತ ನನಿಗೆ ಅಪ್ಪಣೆ ಕೊಟ್ಟರು. ಆಗ ಆ ಸ್ಥಳವನ್ನ ನನಿಗೆ ವಕಪಡಿಸಿದರು. ಆ ಸಾಹೇಬರವರ ಅಪ್ಪಣೆ ಪ್ರಕಾರ ಆ ಸ್ಥಳಕ್ಕೆ ಭರ್ತೀ ಮಾಡಿಸಿದೆ. ಅದಕ್ಕೆ ನನಿಗೆ ೧,೦೦೦ ರೂಪಾಯಿ ಖರ್ಚಾಯಿತು.

ನಮ್ಮ ಛತ್ರಕ್ಕೆ ಬಂದು ಇಳಿಯುವ ಮುಸಾಫರರ ಉಪಯೋಗಕ್ಕಾಗಿ ಛತ್ರಕ್ಕೆ ಹಿಂದಿನ ಅಗಳತೆಗೆ ನಾನು ಭರ್ತೀ ಮಾಡಿಸಿದ್ದ ಜಾಗಾದಲ್ಲಿ ಉತ್ತಮವಾದ ಫಲಫಲಾರಿ ಗಿಡಗಳ ನೆಡಿಸಿ ತೋಟವನ್ನ ಮಾಡಿಸಿದ್ದೆ ೧. ಛತ್ರದ ಪಕ್ಕದಲ್ಲಿ ಇದ್ದ ಹಳ್ಳಕ್ಕೆ ಭರ್ತೀ ಮಾಡಿಸಿ ಮುಸಾಫರರ ಸವಾರಿಯ ಗಾಡಿ ವಗ್ಗೈರೆ ಕಾಲು ನಡೆಗಳು ಸಾಖ್ಯದಲ್ಲಿ ಇಳಿಯುವದಕ್ಕೆ ಅನುಕೂಲವಾವ ಮೈದಾನ ಮಾಡಿಸಿದ್ದೆ ೨. ಛತ್ರದ ಪೂರ್ವ ದಿಕ್ಕಿನ ಅಗಳತೆಗೆ ಭರ್ತೀ ಮಾಡಿಸಿದ್ದೆ ೩. ಈ ಜಾಗಾದಲ್ಲಿ ಸರಕಾರವ ಉದ್ಯೋಗಸ್ಥರು ಮಾರ್ಗಸ್ಥರಾಗಿ ಬರುವವರಿಗೆ ಯೋಗ್ಯವಾದ ಬಂದು ಕಟ್ಟಿಡಗ್ರೂ, ಅದರ ಹಿಂದಕ್ಕೆ ಹುವ್ವಿನ ತೋಟವೂ ಮಾಡಿಸಬೇಕೆಂತ ಇದ್ದೆ. ಅದು ನನ್ನ ಅನಿವಾರ್ಯದಿಂದ ಸಾಧಕಾಕವಾಯಿತು. ಈ ಭೂಮಿ ನನ್ನ ಅನುಭವದಲ್ಲಿ ಈವರಿಗೆ ಇರುತ್ತೆ.

ಈ ವಾಮಿಸಮುದ್ರದ ಕೆರೆ--ಈ ಕೆರೆ ಹುಟ್ಟಿದಾಗಿನಿಂದಲೂ ಇದ್ದ ವಳ ಬೈಲಿನ ತೂಬನ್ನ ಎಗ್ಜಿಕ್ಯೂಟಿವ್ ಇಂಜನೀಯರು ಸಾಹೇಬರು ೧೮೫೯-೬೦ನೇ ಇಸವಿಯೆಲ್ಲಿ ಮುಚ್ಚಿಸಿದರು. ಅದಕ್ಕೆ ಬದಲಾಗಿ ಈ ಕೆರೆಯ ಆ ಬೈರಿನಲ್ಲಿ ಹೊಸವಾಗಿ ದೊಡ್ಡದಾದ ತೂಬು ಮಡಗಿಸಿದರು. ಆ ತೂಬಿಗೆ ತಕ್ಕಹಾಗೆ ನೂತನವಾಗಿ ರಾಯಕಾಲ್ವೆಯನ್ನ ಮಾಡಿಸಿದರು. ಅಲ್ಲಿ ಸ್ವಲ್ಪ ದೂರ ಸರಕಾರದ ಭೂಮಿ ಇತ್ತು. ಅದರಲ್ಲಿ ಸರಕಾರದವರು ಕಾಲ್ವೆ ತಗಿಸ್ದೆದಕ್ಕೆ ನನ್ನ ಅಡ್ಡಿಯಿಲ್ಲ. ಈ ಭೂಮಿಯ ಪಕ್ಕದಲ್ಲಿ ನನ್ನ ಬಾಬತು ಭರ್ತಿ ಭೂಮಿ ಇದೆ. ಅದರಲ್ಲಿ ೨೦೦ ಗೆಜ ಲಾಂಬ ೧||—೦ ಗೆಜ ರುಂದ ೧—೦ ಗೆಜ ವುಂಚ ಈ ರೀತಿಯಲ್ಲಿ ಎಗ್ಜಿಕ್ಯೂಟಿವ್ ಇಂಜಿನೀಯರು ಮೆಸ್ಟರ್ ಡಲ್ಲೂಲ್ ಸಾಹೇಬರು ನೂತನವಾಗಿ ರಾಯ ಕಾಲ್ವೆಯನ್ನು ತೆಗಸಿರುತ್ತಾರೆ.

ಇವರು ಈ ಕೆಲಸವನ್ನು ನಡಿಸುವದಕ್ಕೆ ಮುಂಜಿತವಾಗಿ ನೋಟೀಸು ಅಥವಾ ಕಂಪೆನೇಷನ್ ವಗ್ಗೈರೆ ಕೊಡಿಸದೆ ನನ್ನ ಗೈರಹಾಜರ್ ಕಾಲದಲ್ಲಿ ನನಿಗೆ ತಿಳಿಸದೆ ತಮ್ಮ ಸ್ವತಂತ್ರದಿಂದ ಡಿಟೋ ರಾಯ ಕಾಲ್ವೆಯನ್ನ ನೂತನವಾಗಿ ಮೆಸ್ಟರ್ ಡಿಲ್ಲಾಲ್ ಸಾಹೇಬರು ಮಾಡಿಸಿರುತ್ತಾರೆ. ಇದರಿಂದ ನನ್ನ ೧,೦೦೦ ರೂಪಾಯಿನ ಭರ್ತೀ

ಭೂಮಿ ನಷ್ಟವಾಯಿತು ೧

ನಮ್ಮ ಛತ್ರಕ್ಕೊಕ್ಕೀನ್ಕರ ಮಾಡಿಸಿದ್ದ ಹಿತ್ತಲು, ತೋಟ ಸಹಾ ತೀರಾ ಹೋಯಿತು ... ೨

ನಮ್ಮ ಛತ್ರಕ್ಕೆ ಬಂದು ಇಳಿಯುವ ಗಾಡಿಗಳು ವಗ್ಗೈರೆ ಕಾಲು ನಡೆಗಳು ಸಾಖ್ಯದಲ್ಲಿ ಇಳಿಯುವದಕ್ಕೂ, ನಿಲ್ಲುವದಕ್ಕೂ ಸಹಾ ಕಾಂಪಾಂಡು ಜಾಗಾ ಇಲ್ಲವಾಯಿತು ೩

ನಮ್ಮ ಛತ್ರಕ್ಕೆ ಪಬ್ಲಿಕ್ ರಸ್ತೆಗಳಿಂದ ಜನರು ಯೊವಾಗಲೂ ಸಂಚರಿಸುತ್ತಾ ಇದ್ದ ದಾರಿಯಲ್ಲಿ ಡಿಟೋ ಕಾಲ್ವೆ ಎರಡು ಸ್ಥಳಗಳಲ್ಲಿ ಅಡ್ಡವಾಗಿ ಇರುವದ್ದರಿಂದ ಸವಾರಿಯಲ್ಲಿ ಸಂಚಾರ ಮಾಡುವ ಜನರಿಗೆ ಗಾಡಿ ವಗ್ಗೈರೆ ಕಾಲುನಡೆಗಳು ನಮ್ಮ ಛತ್ರಕ್ಕೆ ಬಾರದೆ ಹಾಗೆ ಅಡ್ಡಿಯಾಯಿತು ... ೪

ಪೂರ್ವದಲ್ಲಿ ನಮ್ಮ ಛತ್ರದ ಹಿಂದೆ ಮುಂದೆ ಪಕ್ಕದಲ್ಲಿ ಸಹಾ ಅಗಳತೆಯು ನೀರು ನಿಂತುಕ್ಕೊಂಡು ನೀರಿನ ಥಂಡಿ ಹವಾ ಶ್ಯಾನೆ ಮತ್ತು ನೀರಿನ ದುರ್ವಾಸನೆ ಅತಿಯಾಗಿತ್ತು. ಇದರಿಂದ ಸೊಳ್ಳೆ ಕಾಟ ಬಹಳ ಇದ್ದ ಪ್ರಯುಕ್ತ ಸಾಹೇಬರು ನೋಡಿ ಮುಚ್ಚಿಸುವದಕ್ಕೆ ಅಪ್ಪಣೆ ಕೊಟ್ಟದ್ದರು, ಅವರ ಹುಕುಂ ಪ್ರಕಾರ ಮುಚ್ಚಿ

56 273

ರೆಂಕೆಯಂ ಅಂತಿಂ ಬಳ್ಳಿ ಅಂಬಾಲಿಯಂಬಿ

ನಿಲುಕಲಕಲ ಅಂಗಿಸಿಯ.

ಮಂ ಅಲಿಸಿಲು ಸಿ ಸಂಂ ಮಲಿಲ್ಲಂ ಸಾಂಕ್ಷಿ ಸಂಂಗಿ ಅಂಂಗಿ

ನಿಲಿಲ ಬಸಿ ಬಸಿ ಬಸಿ ಅಂಬಾಲಿ ಅಂಗಿಸಿಯ ಸಿಂಗಿ ಸಿಂಗಿ ಸಿಂಗಿ ಸಿಂಗಿ

ಸಂಸಂಂಸ ಬಿ ಅಂಬಿಂ ಬಸಿಂಬಿ. ನಿಲಿಸಿ ಅಂಂ ಅಬಿ ಸಿಂಸ

ಸಿಂಗಿ ಅಂಬಿಲಿ ಸಿಂಗಿ ಸಿಂಗಿ ಸಿಂಗಿ ಸಿಂಗಿ. ಸಿಂಗಿ ಸಿಂಗಿ ಸಿಂಗಿ

ಸಾಂಂಗಿ ಸಿ ಸಂಂಗಿ ಸಿಂಗಿ ಸಿಂಗಿ ಸಿಂಗಿ ಸಿಂಗಿ ಸಿಂಗಿ ಸಿಂಗಿ

ಸಿಂಗಿ ಸಿಂಗಿ ಸಿಂಗಿ. ಅಂಬಿಸಿಲಿ ಸಿಂಗಿ ಸಿಂಗಿ ಸಿಂಗಿ ಸಿಂಗಿ

ಅಂಬಿಂ ಬಂಂಬಿಲಿ ಸಿ ಸಂಂಸ ಬಿಲಿಲಿಲಿಂಗಿ ಸಿಲಿ ಸಿಂಸ

ಸಿಲಿಸಿಲಿಂ ಅಂ ಬಿಲಿ ಅಲಿ ಸಿ ಸಿಂಗಿ ಸಿಂಗಿ.

C. J. Allen
Executive Engineer
TumKur Division

5-4-89

ಸಿದ್ದಕ್ಕೆ ನನಿಗೆ ೧,೦೦೦ ರೂಪಾಯಿ ಖರ್ಚು ತಗಲಿತು. ಈಗ ಮೆಸ್ಟರ್ ಡಲ್ಲಾಲ್ ಸಾಹೇಬರು ಮಾಡಿಸಿರುವ ಹೊಸ ಕಾಲ್ವೆಯಿಂದ ನಾನು ಮಾಡಿಸಿದ್ದ ಕೆಲಸಕ್ಕೆಲ್ಲಾ ಪ್ರತಿಕೂಲವಾಗಿರುತ್ತೆ. ಈ ವಿಚಾರದಲ್ಲಿ ಅವರಿಗೆ ಬರದು ಇದ್ದದ್ದಕ್ಕೆ ಅವರು ಕೊಟ್ಟರುವ ಜಾವಾಬು ನೋಡಿ ನಂತರ ಚೀಫ್ ಇಂಜನೀಯರ್ ಸಾಹೇಬರಿಗೂ, ಡಿಸ್ಟ್ರಿಕ್ಟ್ ಡಿಪ್ಟ್ಯೀ ಕಮಿಷನರ್ ಸಾಹೇಬರಿಗೂ ಅರ್ಜಿಗಳನ್ನ ಬರದು ಇದ್ದೆ, ಅದಕ್ಕೆ ಅವರುಗಳ ಜವಾಬು ಬರಲಿಲ್ಲ. ಮೆಸ್ಟರ್ ಡಲ್ಲಾಲ್ ಸಾಹೇಬರು ಕೊಟ್ಟರುವ "ಇಂಡಾರನನ್ನ ಈಗ ಸ್ವಾಮಿಯವರ ಪರಾಂಬರಿಕೆಗೆ ಇದರಲ್ಲಿ ಗರ್ಭಿತ ಮಾಡಿದ್ದೇನೆ."

ಈ ವಿಚಾರದಲ್ಲಿ ಸ್ವಾಮಿಯವರನ್ನ ಬೇಡುವದೇನಂದರೆ

೧. ಬಹು ಜನರ ಪೌಖ್ಯಕ್ಕೋಸ್ಕರವಾಗಿ ಭಾವೀ ಲಾಗವಡು ಮೆಚ್ಚ ಮಾಡಿ ನಾನು ಮಾಡಿರುವ ಕೆಲಸ ವೆಲ್ಲವನ್ನೂ ಎಗ್ಜಿಕ್ಯೂಟಿವ್ ಇಂಜಿನೀಯರು ಮೆಸ್ಟರ್ ಡಲ್ಲಾಲ್ ಸಾಹೇಬರು ನಾಶಪಸಿರುವ ಕಾರಣ ಅವರಿಂದ ಸರಿಯೊಪ ಕಂಪೆನ್ಸೇಷನ್ ಕೊಡಿಸಬೇಕು.

೨. ಮಾಯಿಸಮುದ್ರದ ಕೆರೆಗೆ ನೂತನವಾಗಿ ಈಗ ಇರುವ ಕೋಡೀ ಮೇಲೆ ಒಂದು ಗಜ ಎತ್ತರಕ್ಕೆ ನೀರು ನಿಲ್ಲುವಂತೆ ಭಾವೀ ಮೊಬಲಗಿನಿಂದ ಕೆರೆಗೆ ಕಾಮಗಾರಿ ಮಾಡಿಸುವದಕ್ಕೆ ಅಂದಾಜಾ ಆಗಿರುತ್ತೆ, ಅದಕ್ಕಾಗಿ ಕೆಲವುಜನ ಜಮೀರ್ದಾರರಿಗೆಲ್ಲಾ ಕಂಪೆನ್ಸೇಷನ್ ಕೊಡುವದಕ್ಕೆ ರಿಕಾರ್ಡು ಆಗಿರುತ್ತೆ. ಅದರಂತೆ ಈ ಕೆರೆಗೆ ಕಾಮಗಾರಿ ಆದರೆ ಈ ಕೆರೆಯೆಲ್ಲಿ ಭಾರಿಯಾಗಿ ನೀರು ನಿಲ್ಲುವ ಕಾರಣ ಯಲ್ಲರಿಗೂ ಸಂತೋಷವಾಗುತ್ತೆ. ಈ ಕೆರೆಯ ಪಕ್ಕದಲ್ಲಿರುವ ನಮ್ಮ ಛತ್ರಕ್ಕೂ ಅದರಲ್ಲಿ ಬಂದು ಇಳಿಯುವ ಮುಸಾಫರ್ ಜನರಿಗೂ ಸಹಾ ಮಳೇ ಕಾಲದಲ್ಲಿ ಕೆರೆ ತುಂಬಿ ಕೋಡೀ ಬಿದ್ದಾಗ ಅಪಾಯ ತಪ್ಪುದ್ದಲ್ಲವೆಂದು ಭಯಪಡಬೇಕಾಗುತ್ತೆ. ಈ ಕೆರೆಗೆ ಕೋಡಿ ಉಚಾವಣೆ ಕೆಲಸವೇನೂ ಇಲ್ಲದೇ ಇದ್ದಾಗ ೧೪೮೦ನೇ ಇಸವಿ ನವಂಬರು ತಿಂಗಳಲ್ಲಿ ಕೆರೆಯಲ್ಲಿ ೧ ಗಜ ಎತ್ತರ ನೀರು ಕತಮೆಯಾಗಿದ್ದಾಗ ಮತ್ತು ಮಳಗಾಲವೆಲ್ಲಾ ತೀರದಾಗ ಡಿಟೋ ನವಂಬರ್ ೩೦ಗಳು ಆಖೈರಿನಲ್ಲಿ ಬಂದು ದಿವಸ ನಡಿಸಿದ ಮಳಗೇನೇ ಈ ಕೆರೆ ಏಳು ಭಾಗವಾಗಿ ಒಡದುಹೋಯಿತು. ಆ ಪ್ರವಾಹದಲ್ಲಿ ಸಿಕ್ಕಿದ್ದ ಈ ಊರಲ್ಲಿ ಸಂಸಾರ ಮಾಡುತ್ತಾ ಇದ್ದ ಕೆಲವು ಜನರ ಮನೆಗಳೂ, ವ್ಯಾಪಾರದ ಅಂಗಡಿಗಳೂ ಸಹಾ ಕೊಚ್ಚಿ ಹೋದವು. ಮತ್ತು ನಮ್ಮ ಛತ್ರದ ಎರಡು ಪಾಲು ಕಟ್ಟಡ ಕ್ಕೊಚ್ಚಿಹೋಯಿತು. ಆ ಕಾಲದಲ್ಲಿ ನಮ್ಮ ಛತ್ರದಲ್ಲಿ ಇಳಿದು ಇದ್ದ ಮುಸಾಫರ್ ಜನರನ್ನ ಈ ಅಪಾಯದಿಂದ ಸುದಾರಿಸಿ ಕರದುಕ್ಕೊಳ್ಳುವದೇ ನನಿಗೆ ಮುಖ್ಯ ಕೆಲಸವಾಯಿತು. ಈ ವಿಚಾರವನ್ನ ಆಗ್ಯೆ ತುಮಕೂರು ಡಿಸ್ಟ್ರಿಕ್ಟ್ ಡಿಪ್ಟೀ ಕಮಿಷನರವರಾಗಿದ್ದು ಈಗ ದಯಾಳುವಾಪ ದೀವಾ ಸಾಹೇಬ್ಬಹದ್ದರವಾಗಿರುವ ಕೆ. ಸೇಷಾದ್ರಿ ಐಯ್ಯರ್‌ವರು ಸಮಕ್ಷಮ ಬಂದು ಪರಾಂಬರಿಸೋಣವಾಗಿದೆ.

ದಯಾಳುವಾಪ ಸ್ವಾಮಿಯವರು ನಮ್ಮ ಛತ್ರದಲ್ಲಿ ಮೊದಲಿಗೆ ಇಳಿದು ಇದ್ದು ಎರಡು ದಿವಸಗಳು ಆನಂ ದದಿಂದ ದೇವತಾರಾಧನೆ ಮಾಡಿದ ಮಹಿಮೆಯಿಂಪ ಆ ಭಾಗದ ಕಟ್ಟಡ ಮಾತ್ರ ಕೊಚ್ಚಿ ಹೋಗದೆ ಈಗಲೂ ಭದ್ರವಾ ಗಿರುತ್ತೆ. ಇದನ್ನ ೧೮೮೦ನೇ ಡಿಸೆಂಬರು ತಿಂಗಳಲ್ಲಿ ಸ್ವಾಮಿಯವರು ಸಮಕ್ಷಮ ಬಂದು ಪರಾಂಬರಿಸೋಣವಾಗಿರುತ್ತೆ. ಈ ಛತ್ರ ಕೊಚ್ಚಿ ಹೋಗಿರುವ ಭಾಗಕ್ಕೆ ನಮಗೆ ಸರ್ಕಾರದಿಂದ ಕಂಪೆನ್ಸೇಷನ್ ಕೊಟ್ಟರುವದಿಲ್ಲ. ಮತ್ತು ಆಗ ಈ ಛತ್ರನನ್ನ ನೋಡಿ, ಈ ಛತ್ರವನ್ನು ಇನ್ನೂ ಕೆಲವುಜನ ರೈತರ ಮನೆಗಳನ್ನೂ ಅಂಗಡಿಗಳನ್ನೂ ಸಹಾ ಮುಸಾ ಫರಖಾಂಗೆ ಒಳಿಯೆಲ್ಲಿ ಕಟ್ಟಿಸುವದಕ್ಕೆ ಸ್ವಾಮಿಯವರೂ ಮತ್ತು ಅಮಲ್‌ದಾರ್ ಸೈದ್ ಅಹಮ್ಮದ್ ಸಾಹೇಬರೂ ಸಹಾ ಕೇರಿ ಸ್ಥಳಗಳನ್ನ ನಿರ್ದೇಶ ಮಾಡಿರೋಣವಾಗಿತ್ತು. ಅದು ಈಚಿಗೆ ಹಾಗೆಯೇ ನಿಂತಿದೆ. ಈ ಸಂಗತಿ ಸ್ವಾಮಿಯವರಿಗೆ ಜ್ಞಾಪಕವಿರಬಹುದು.

ಈಗ ಮಾಯಿಸಮುದ್ರದ ಕೆರೆಗೆ ನೂತನವಾಗಿ ಭಾವೀ ಕಾಮಗಾರಿ ವಗ್ಯೆರೆ ಮಾಡಿಸುವ ಕಾರಣದಿಂದ ನಮ್ಮ ಈ ಛತ್ರವನ್ನ ಇಂಜನೀಯರ್ ಇಲಾಖೆಯವರು ತೆಗದು ಸ್ವಾಮಿಯವರು ಬಂಗಲೇ ಬಳಿಯಲ್ಲಿ ನಿರ್ಮಾ ಣಿಸಿ, ಇರುವ ಜಾಗಾದಲ್ಲಿ ಆಗಲೀ ಅಥವಾ ಈಗ ಸರಕಾರದವರು ಪಪ್ಪು ಗ್ಯೋತ್ತು ಮಾಡುವ ಜಾಗಾದಲ್ಲಿ ಆಗಲೀ ಮುಸಾಫರರಿಗೆ ಅನುಕೂಲವಾಗಿ ಈಗ ಇರುವ ಛತ್ರವನ್ನ ಕಟ್ಟಿಸಿಕೊಡಬೇಕು. ಅಥವಾ ಆ ಬಗ್ಯೆ ಸರಿಯೊಪ ಕಂಪೆನ್ಸೇಷನ್ ಅಂದಾಜಾ ಪ್ರಕಾರ ನನಗೆ ಕೊಡಿಸಿಕೊಟ್ಟರೆ ಆ ಕೆಲಸವನ್ನ ನಾನೆ ಮಾಡಿಸುತ್ತೀನಿ

ವಿಚಾರಗಳಲ್ಲಿ ನನಿಗೆ ನ್ಯಾಯವಾಪ ಫೈಸಲ್ ಆಪ್ಪಣೆಯಾಗಬೇಕು.

B. ಅರ್ಜಿಯ ಅನೇ ಕಲಮಿನ ಫಿರ್ಯಾದ್ ಸಂಗತಿ.

ಸರ್ವೆ೧೮೫೪ನೇ ಇಸವಿಯಲ್ಲಿ ನಮ್ಮ ಛತ್ರದ ದೀಪಾರಾಧನೆಬಗ್ಗೆ ಮೆಷ್ಟರ್ ಚೀಫ್‌ಕಮ್ಮಿಷನರ್ ಸಾಹೇ ಬರವರ ಸ್ವಾಂಕರ್ಷನಿಂದ ತುಮಕೂರು ಡಿವಿಜ್ ಸೂಪೆ೧೦ಟೆಂಡ್ಯಾಂಟ್ ಮೆಷ್ಟರ್ ಡಾಬಿಸ್ ಸಾಹೇಬರು ಈ ಮಾಯಿಸಮುದ್ರದ ಸಮ್ಮತಿನಲ್ಲಿ :-

೧	ಕೋಡಿನಾಗ	ಸಮುದ್ರ	ಗ್ರಾಮದಲ್ಲಿ	೨-೧-೧	ಖಂಡಿ	ಜಮೀನಿಗೆ	೧೦-೦-೦ ರೂಪಾಯಿ ಬೇರೀಜು
೨	ಸೊರವನಹಳ್ಳಿ	,,		೩-೩-೧	,,	,,	೦೬-೩-೩ ,, ,,
೩	ಬೊಮ್ಮೇನಹಳ್ಳಿ	,,		೬-೧೫-೧	,,	,,	೩೯-೬-೧ ,, ,,
೪	ತೂಬಿನಕಟ್ಟೆ	,,		೧-೯-೨	,,	,,	೯-೬-೮ ,, ,,
	ಈ ನಾಲ್ಕು	ಗ್ರಾಮಗಳಿಂದ		೧೩-೧೩-೧	,,	,,	೮೩-೪-೪ ರೂಪಾಯಿಗಳ ಅಕಾರ

ಗೊತ್ತುಮಾಡಿ ಈ ನಾಲ್ಕು ಗ್ರಾಮಗಳಲ್ಲಿಯು ರೈತರಿಗೆಲ್ಲಾ ಬ್ಯಾಡವಾದ ಗ್ರಾಮಗಳಲ್ಲಿ ಆಖ್ಯೆರ್ ಭಾಗದ ಭೂಮಿಯನ್ನು ಅಳತಿಮಾಡಿಸಿದ ಜಮೀನುಗಳನ್ನು ಪಕ್ಕದಲ್ಲಿ ವುಚಾಯಿಸಿ ವತ್ತುವದಕ್ಕೆ ಆಸ್ಪದವಿಲ್ಲದಹಾಗೆ ಕಲ್ಲುಗಳ ನೆಡಿಸಿ ಡಿಟೊ ೧೩-೩-೧ ಖಂಡಿ ಭೂಮಿಗೆ ಡಿಟೊ ೮೩-೪-೪ ರೂಪಾಯಿ ಬೇರೀಜು ಹಾವುಮಾಡಿ ಸಾಲಿಯಾನಾ ೮-೧೧-೮ ರೂಪಾಯಿ ಜೋಡಿಯೆನ್ನ ಸರಕಾರಕ್ಕೆ ಕೊಡುವಂತೆ ನಮಗೆ ಜೋಡಿ ಇನಾಮಾಗಿ ಕೊಟ್ಟಿರುತ್ತಾರೆ.

ಈಚಿಗೆ ೧೮೬೬ನೇ ಇಸವಿಯಲ್ಲಿ ಇನಾಂ ಸೆಟಿಲ್ ಆಯಿತು. ಆಗ್ಗೆ ಡಿಟೊ ಹದ್ದಿನಲ್ಲಿರುವ ಈ ಭೂಮಿಗೆ ೧೮೦-೫೬ಯೆಕರೆಯಿಂತೆ ಗೊತ್ತುಮಾಡಿ ಸಾಲಿಯಾನಾ ೮-೧೨-೦ ರೂಪಾಯಿ ಜೋಡಿ ಕ್ವಿಟ್‌ರೆಂಟ್ ಕೊಡಬೇಕೆಂತ ನಮಗೆ ಇನಾಂ ಟೈಟಲ್‌ಡೀಡುಗಳನ್ನು ಸರಕಾರದವರು ಕೊಟ್ಟಿರುತ್ತಾರೆ.

ಈಚಿಗೆ ಸರ್ವೆಜಮಾಬಂದಿ ನಡೀತು, ಅದರಲ್ಲಿ ಡಿಟೊ ಹದ್ದಿನಲ್ಲಿರುವ ನಮ್ಮ ಇನಾಮತಿ ಭೂಮಿಗೆ ಸರ್ವೆಯೆಲ್ಲಿ ೨೫೦ ಯೆಕರೆ ಭೂಮಿ ಇದಕ್ಕೆ ಆಕಾರ ೧೧೧-೦-೦ ರೂಪಾಯಿಯೆಂತಲೂ ಈ ಪೈಕಿ ೧೦೬-೩೫ ಎಕರೆ ಭೂಮಿಗೆ ೧೦೧-೦-೦ ರೂಪಾಯಿ ಆಕಾರವೆಂತಲೂ ಇದು ಜೋಡಿ ಜಾತಾ ವುಳಕೆ ೧೩೪-೯ ಎಕರೆ ಇದರ ಆಕಾರ ೧೧-೦-೦ ರೂಪಾಯಿಯೆಂತಲೂ ಇದು ಖಾಲ್‌ಸಾತ್ ಭೂಮಿ ಯೆಂಬದಾಗಿ ಗೊತ್ತಾಗಿರುವಹಾಗು ಇಷ್ಟವಿದ್ದರೆ ಈ ಜಮೀನು ಇಟ್ಟುಕೊಂಡು ಮೊಬಲಗು ಕೊಡಬೇಕು; ಇಷ್ಟವಿಲ್ಲವಾದರೆ ಜಮೀನು ಬಿಡಬೇಕೆಂತ ಆ ಇಲಾಖೆಯಿಂದಲು ತಾಲ್ಲೂಕಿನಿಂದಲೂ ನಮಗೆ ನೋಟೀಸ್ ಆಯಿತು. ಅದಕ್ಕೆ ಆಗಲೆ ಜವಾಬು ತಿಳಿಸಿದ್ದೆವು.

ಈಚಿಗೆ ಅದೇವಿಚಾರದಲ್ಲಿ ತಾಲ್ಲೂಕಿನವರು ತುಂಬಾಗಲಾಟೆ ನಡಿಸಿದಪ್ರಯುಕ್ತ ಶ್ರೀಮಾ ದೀರ್ವಾಸಾ ಹೇಬರವರಿಗೆ ೪-೧೧-೧೮೬೭ಲ್ಲು ಅರ್ಜಿಕೊಟ್ಟೆ. ಅದು ಫೈಸಲ್ ಬಗ್ಗೆ ತುಮಕೂರು ಡಿಸ್ಟ್ರಿಕ್ಟಿಗೆ ಹೋಗಿ ಅಲ್ಲಿ ನನ್ನ ಸಮಕ್ಷಮ ವಿಚಾರನೆತದು ಡಿಪ್ಟೀ ಕಮಿಷನರ್ ಮೆಸ್ಟರ್ ಕ್ರಿಷ್ಣಮೂರ್ತಿಗಳವರು ಸ್ವಾಮಿಯವರ ಫೈಸಲ್‌ಬಗ್ಗೆ ಚೀಫ್ ಸೆಕ್ರಟರಿಸಾಹೇಬರವರಿಗೆ ಲೆಟರ್ ಬರೆದು ಇರುತ್ತಾರೆ. ಆ ವಿಚಾರದಲ್ಲಿ ಹೋದವರುಷ ಸ್ವಾಮಿಯವರ ದರ್ಬಾರಿನಲ್ಲಿ ಕಾದುಯಿದ್ದೆ. ನಿನ್ನ ಸಮ್ಮಂಧದ ರಿಕಾರ್ಡುಗಳು ಕಚೇರಿಗೆ ಬಂದಿರುತ್ತೆ. ನೋಡಿ ಫೈಸಲ್‌ಮಾಡುವದಾಗಿ ಸ್ವಾಮಿಯವರ ಸಮಕ್ಷಮ ಚೀಫ್ ಸೆಕ್ರಟರಿ ಸಾಹೇಬರವರ ಅಪ್ಪಣೆ ಆಯಿತು. ಅದು ಫೈಸಲಾಗಿ ಇಲ್ಲ.

ಸರಕಾರದಿಂದ ನಮ್ಮಗೆ ಕೊಟ್ಟಿರುವ ಇನಾಂ ಟೈಟಲ್‌ಡೀಡುಗಳಲ್ಲಿ ಕಂಡಂತೆ ೧೮೦-೫೬ ಎಕರೆ ಭೂಮಿ ನಮಗೆ ಇಲ್ಲವಾಯಿತ್ತು. ಮೊದಲು ನಮ್ಮ ಇನಾಮಿಗೆ ಅಳತೆ ಆಗಿರುಹೆದಕ್ಕಿಂತ ಈಗ ಹೆಚ್ಚಾಗಿ ಆಜೂಬಾಜೂದಲ್ಲಿ ಯಾವಕಡೆಯೆಲ್ಲೂ ವುಚಾಯಿಸುವಥಕ್ಕೆ ಆಸ್ಪದವಿಲ್ಲದಹಾಗೆ ಪಹಣಿ ಕಲ್ಲುಗಳನ್ನ ಇನಾಮು ಜಮೀನಿನ ಸುತ್ತಲೂ ಸರಕಾರದವರು ನೆಡಿಸಿರುತ್ತಾರೆ. ಡಿಟೋ ಗುರ್ತಿನೊಳಗಿರುವ ನಮ್ಮ ಭೂಮಿಗೆ ಇನಾಂ ಇಲಾಖೆಯವರು ೧೮೦-೫೬ಯೆಕರೆಯೆನ್ನಾಗಿ ಮಾಡಿರುತ್ತಾರೆ. ಈ ಇನಾಂ ಇಲಾಖೆಯ ಅಳತೆಗಿಂತ ಈಚಿಗೆ ಸರ್ವೇ ಇಲಾಖೆಯ

ಅಳತೆಯಲ್ಲಿ ೬೦ ಎಕರೆ ಭೂಮಿ ಹೆಚ್ಚಾಗಿ ಇರುತ್ತೆ. ಇದಕ್ಕೆ ಕಾರಣವೇನಂದರೆ ನಮಗೆ ಕೊಟ್ಟಿರುವ ಇನಾಂ
ಭೂಮಿ ನಾಲ್ಕು ಗ್ರಾಮಗಳದು ೧

ಅಮ ಆಯಾಯ ಗ್ರಾಮಗಳಲ್ಲಿ ರೈತರಿಗೆಲ್ಲಾ ಬ್ಯಾಡವಾದದ್ದು ೨

ಮತ್ತು ಯೆಲ್ಲಾ ಗ್ರಾಮಗಳಲ್ಲಿಯು ಎಂದಿಗೂ ಸಾಗುವಳಿಯಿಲ್ಲದ ಗೋಮಾಳವನ್ನಾಗಿ ಗ್ರಾಮಗಳ ಆಖ್ಯೈರ್
ನಲ್ಲಿ ಇದ್ದ ಬಂಜರು ಭೂಮಿಗಳು ನಮ್ಮ ಇನಾಮತಿಗೆ ಸೇರಿ ಇವೆ. ೩

ಆಗಿನ ಅಳತೆವ್ಯಾಳೆ ಬಂದು ಭೂಮಿಯಿಂದ ಮತ್ತೊಂದು ಭೂಮಿಗೆ ಅರ್ಧ ಗಜ ರುಂದೀ ಪ್ರಕಾರ
ಬದುಗಳ ಬಿಟ್ಟು ಅಳತೆ ಆಗಿ ಸುತ್ತಲೂ ಕಲ್ಲುಗಳ ನೆಡಿಸಿದ್ದರು ... ... ೪.

ಈಗ ಸರ್ವೇ ಇಲಾಖೆಯವರು ತಮ್ಮ ಅಳತೆಯಲ್ಲಿ ಬಂದು ಭೂಮಿಯಿಂದ ಮತ್ತೊಂದು ಭೂಮಿಗೆ ಅರ್ಧ ಅಡಿ ಅಗಲವಾದರೂ ಬದು ಬಿಡದೆ ಅಳತೆ ಆಗಿರುವ ಕಾರಣದಿಂದ ೬೦ ಯೆಕರೆ ಭೂಮಿ ಈಗಿನ ಸರ್ವೆಯಲ್ಲಿ ಜಾಸ್ತಿ ಕಂಡು ಬಂದಿದೆ. ಇದು ಈ ನಾಲ್ಕು ಗ್ರಾಮಗಳಲ್ಲಿಯೂ ಆಖ್ಯೈರ್ ಭಾಗದ ಭೂಮಿ ಆದ್ದರಿಂದ ಮೊದಲಿಗೆ ಆಯಾಯ ಭೂಮಿಯೆ ಸುತ್ತಲು ಇದ್ದ || ಗಜ ರುಂದಿಯೆ ಬದುಗಳು ನಮಗೆ ಇನಾಮಾಗಿ ನೋಷಣಕಮಾಡಿ ನೆಡಸಿ ಇದ್ದ ಕಲ್ಲುಗಳೊಳಗೆ ಶೇರಿವ್ಹಾದಿಗಿದೆ. ಆದ್ದರಿಂದ ಈಗ ಸರ್ವೆಯೆಲ್ಲಿ ಜಾಸ್ತಿ ಕಂಡಿರುವ ೬೦ ಯೆಕರೆ ಭೂಮಿಯೆನ್ನ ಈಗ ಸ್ವಾಮಿಯವರು ಇನಾಮಿನ ಭೂಮಿಯೆನ್ನಾಗಿಯೆ ತಿಳಿಯತಕ್ಕದ್ದು ಯುಕ್ತವಾಗಿದೆ. ಇದಕ್ಕೆ ಬ್ಯಾರೆ ಮೊಬಲಗು ಕಟ್ಟತಕ್ಕದ್ದಲ್ಲ.

೧೮೫೪ನೇ ಇಸವಿಯೆಲ್ಲಿ ಡಿಟೊ ನಾಲ್ಕು ಗ್ರಾಮಗಳೆಲ್ಲಿಯೂ ಯೆಂದಿಗೂ ಸಾಗುವಳಿಯಿಲ್ಲದ ಬಂಜರು ಗೋಮಾಳದ ಭೂಮಿ ೧೩-೧೩-೧೩ಖಂಡಿಗೆ ೧೮೦-೫೬ ಯೆಕರೆ ಭೂಮಿಯನ್ನ ಇನಾಮಾಗಿ ವಿಂಗಡಿಸಿ ಅಳತೆಯಿಂದ ಪಹಣಿ ಕಲ್ಲುಗಳ ನೆಡಿಸಿ ಅವಕ್ಕೆ ಮೊಬಲಗು ವೆಕ್ಯಾನಬಾರದೆ ಇರುವದಕ್ಕಾಗಿ ಆ ಭೂಮಿಗೆ ೪೭--೮-೪ ರೂಪಾಯಿನ ಆಕಾರವನ್ನ ಗೊತ್ತು ಮಾಡಿಸಿ ಮೆಸ್ಟರ್ ಜೀಫ್ ಕಮಿಷನರ್ ಸಾಹೇಬ್ರವರು ಸ್ವಾಕ್ಷರ ಮಾಡಿ ಅದನ್ನ ನಮಗೆ ಜೋಡಿ ಇನಾಮಾಗಿ ಕೊಡಿಸಿರುತ್ತಾರೆ. ನಮಗೆ ಕೊಟ್ಟಿರುವ ಡಿಟೊ ಇನಾಂ ಭೂಮಿಯೆಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ೧೮೫೪ನೇ ಇಸವಿ ಲಾಗಾಯಿತಿನಿಂದ ಈ ವರಿವಿಗೆ ಸಾಗುವಳಿಯಿಲ್ಲದೆ ಬಂಜರಿನಲ್ಲಿಯೆ ಇರುತ್ತೆ. ಅದರೂ ಡಿಟೊ ೪೭-೮-೪ ರೂಪಾಯಿ ಆಕಾರ ಗೊತ್ತಾಗಿದೆ. ಅದಕ್ಕೆ ನಾ[redacted] ಒಬ್ಬನಾಗಿರು ವಕಾರಣ ಆ ಬಾಬತು ಕ್ವಿಟ್‌ರೆಂಟ್ ಮೊಬಲಗು ೪--೧೨--೦ ರೂಪಾಯಿ ಇದರ ಲೋಕಲ್‌ಫಂಡು ಸಹಾ ಸರಕಾರಕ್ಕೆ ಸಾಲೆಸಾಲು ಕೊಡುತ್ತೇನೆ.

ನಮ್ಮ ಇನಾಮು ಹದ್ದಿನಲ್ಲಿರುವ ಭೂಮಿ ಪೈಕಿ ಮೂರು ಪಾಲು ಭೂಮಿ ಸಾಗುವಳಿಗೆ ಯೋಗ್ಯವಾದದ್ದಲ್ಲ ಕಾರಣವಾವೆ ಗ್ರಾವಲ್ ಭೂಮಿ ಮತ್ತು ಗೋಮಾಳಕ್ಕೆ ತಕ್ಕಹಾಗೆ ಉತ್ತಮವಾವ ಹುಲ್ಲು ಕೂಡ ಬೆಳೆಯುವದಿಲ್ಲ. ಇಂಥಾ ನಾಕಾರೆ ಭೂಮಿಗೆ ಸರ್ವೇ ಇಲಾಖೆಯವರು (ಬಳ್ಳೀ ಉತ್ತಮವಾದ ಸಾಗುವಳಿ ಭೂಮಿಗೆ ಯಾವ ದರದ ಕಂದಾಯವನ್ನ ಕಟ್ಟುತಾರೆಯೋ) ಆ ದರದ ಆಕಾರವನ್ನೇ ಈ ನಾಕಾರೆ ಭೂಮಿಗೂ ಕಟ್ಟ ಮೊಬಲಗು ಕೊಡಬೇಕೆನ್ನುತ್ತಾರೆ. ಅದು ನಮಗೆ ಕಷ್ಟವಾಗಿರುತ್ತೆ. ಈ ಅನ್ಯಾಯದ ಮೊಬಲಗನ್ನ ಯಾವ ರೀತಿಯೆಲ್ಲಿ ಕೊಡುವದು.

ನಮ್ಮ ಇನಾಮತಿಸ್ಥೆ ಜಮಿನು ಕೊಡುವಾಸ್ಥೆ ಅದು ಯೆಂದಿಗೂ ಸಾಗುವಳಿ ಇಲ್ಲದ ಬಂಜರು ಗೋಮಾಳದ ಭೂಮಿಯಾಗಿತ್ತು. ಎಂದಿಗೂ ಸಾಗುವಳಿ ಆಗಿ ಇದ್ದಿದ್ದಲ್ಲ ಅಂಥಾ ನಾಕಾರೆ ಭೂಮಿ ೧೩--೧೩--೧೩ಕ್ಕೆ ೪೭-೮-೪ ರೂಪಾಯಿನ ಆಕಾರವನ್ನೆ ಠರಾವು ಮಾಡಿಸಿ ಸಾಲೆ ಸಾಲು ೪--೧೧--೪ ರೂಪಾಯಿನ ಜೋಡಿ ಕೊಡುವಂತೆ ಮೊಕರೂರಿನಿಂದ ೧೮೫೪ನೇ ಇಸವಿಯೆಲ್ಲಿ ಫೈಫ್ಟರ್ ಜೀಫ್ ಕಮಿಷನರ್ ಸಾಹೇಬರವರು ಮಂಜೂರು ಮಾಡಿ ಇರುತ್ತಾರೆ. ಅದರಂತೆ ನಾನು ಒಪ್ಪಿರುತ್ತೇನೆ ಈಚಿಗೆ ಸರ್ವೇ ಇಲಾಖೆಯವರು ಆಗಿನ ಅಳತೆ ನಿಬಂಧನೆಯೆನ್ನು ಆ ಜಮೀನಿಗೆ ಮೊದಲಿಗೆ ಠಾವಾಗಿದ್ದ ಆಕಾರದ ನಿಬಂಧನೆಯೆನ್ನು ಈಗ ತಪ್ಪಿಸುವದಾಗಿ ಇದ್ದಲ್ಲಿ ೧೮೫೪ನೇ ಇಸವಿಯೆಲ್ಲಿ ಆಗಿರುವ ನಿಬಂಧನೆಯು ಈಚಿಗೆ ೧೮೬೯ನೇ ಇಸವಿಯೆಲ್ಲಿ ಸೆಟಲ್ ಆಗಿರುವ ಇನಾಂ ನಿಬಂಧನೆಯಿಂದ ನಮಗೆ ಕೊಡಿಸಿರುವ ಟೈಟಲ್‌ಡೀಡುಗಳು ಸಹಾ ಸಫಲವಾಗುವದಿಲ್ಲವಷ್ಟೆ.

277
347

ಈ ಕಾರಣದಿಂದ ಸ್ವಾಮಿಯವರನ್ನ ಬೇಡುವದೇನಂದರೆ

೧ ಹಿಂದೆ ೧೪೯೯ನೇ ಇಸವಿಯಲ್ಲಿ ಇನಾಂ ಸೆಟಲ್ ಆಗಿ ಸರಕಾರದಿಂದ ನಮಿಗೆ ಟೈಟಲ್‌ಡೀಡುಗಳಿ ಕೊಟ್ಟರು ಪಂತೆ ನಮ್ಮ ಇನಾಂ ಪದ್ದಿನಲ್ಲಿರುವ ಎಲ್ಲಾ ಭೂಮಿಯನ್ನು ಮೊದಲಿನಂತೆಯೇ ಜೋಡಿಯಾಗಿ ಕೊಡಿಸಿಕೊಡಬೇಕು.

೨ ಸರ್ವೇ ಇಲಾಖೆಯವರು ಹೇಳುವ ಖಾಲ್‌ಸಾತು ಭೂಮಿ ಎಂಬುವ ೬೦ ಯೆಕರೆ ಭೂಮಿಯಲ್ಲಿ ಇನಾಂ ಇಲಾಖೆಯವರು ಸೆಟಲ್ ಮಾಡಿರುವ ೧೪೦-೫೬ ಭೂಮಿಗೆ ಶೇಕಡಾ ಪ್ರಕಾರ ಎಷ್ಟುಭೂಮಿ ಇನಾಮಿಗೆ ಉತ್ತಾ ರವಾಗಬೇಕೋ ಅದು ವಜಾ ಹೋಗತ ಇನ್ನು ಎಷ್ಟು ಯೆಕರೆ ಭೂಮಿ ಖಾಲ್ಸಾಕ್ಕೆ ನಿಲ್ಲುತ್ತೊ ತಿಳಿಯಲಿಲ್ಲ. ಅದನ್ನ ತಿಳಿಯಬೇಕಾಗಿದೆ.

೩ ನಮ್ಮ ಇನಾಮಕ್ಕೆ ಗೊತ್ತಾಗಿರುವ ಬೌಂಡ್ರೀಯಲ್ಲಿ ಸಾಗುವಳಿ ನಾಲಾಯಿಕ್ ಆದ ಮತ್ತು ಬಳ್ಳೀ ಹುಲ್ಲು ಕೂಡ ಬೆಳೆಯದೇ ಇರುವ, ಕಲ್ಲುಣವಾದ ಗ್ರಾವಲ್ ಭೂಮಿ ನೂರು ಯೆಕರೆಗಿಂತ ಹೆಚ್ಚಾಗಿರುತ್ತೆ. ಇಂಥಾ ಭೂಮಿ ನಮ್ಮ ಬೌಂಡ್ರೀ ಮಧ್ಯೆ ಅಲ್ಲಲ್ಲಿ ಬಹಳವಾಗಿರುತ್ತೆ. ಅದನ್ನ ಬಿಡುವದಕ್ಕೆ ಮಾರ್ಗವಿಲ್ಲವಾಗಿದೆ. ಡಿಟೊ ಖಾಲ್ಸಾತ್ ಭೂಮಿ ಎಂಬುವದು ನಮ್ಮ ಇನಾಮಿನಲ್ಲಿ ಹೆಚ್ಚಿಗೆ ಬಂದದ್ದು ಆ ಭೂಮಿಯನ್ನು ಡಿಟೊ ಟೈಟಲ್‌ಡೀಡುಗಳಲ್ಲಿ ಕಂಡಂಥಾ ೧೪೦-೫೬ಯೆಕರೆ ಭೂಮಿಯು ಸಾಗುವಳಿ ಬಗ್ಗೆ ಧನಗಳನ್ನೂ ಕುರಿಗಳನ್ನೂ ಮಡಗಬೇಕಾಗಿದೆ. ಇದರ ಸಂರಕ್ಷಣೆ ಬಗ್ಗೆ ಸ್ವಾಮಿಯವರು ದಯಮಾಡಿ ಡಿಟೊ ಖಾಲ್‌ಸಾತ್ ಭೂಮಿ ಎಂಬುವದನ್ನ ಗೋಮಾಳವನ್ನಾಗಿ ಸಾಬಕಿನಂತೆ ಆಕಾರವಿಲ್ಲದೆ ನಮಗೆ ಕೊಡಿಸಿಕೊಡಬೇಕು. ನಮ್ಮ ಬೌಂಡರಿಯಲ್ಲಿರುವ ೧೪೦-೫೬ಯೆಕರೆ ಭೂಮಿ ಸಾಗುವಳಿಗೋಸ್ಕರವಾಗಿ ಈ ಮಧ್ಯದಲ್ಲಿ ನೂತನವಾಗಿ ಬಂದು ಗ್ರಾಮವನ್ನ ಆಬಾದುಮಾಡಿಶಿದ್ದೆ. ಅದಕ್ಕೆ ತಕಾವಿ ವಗೈರೆ ವಿಷಯದಲ್ಲಿ ೩,೦೦೦ ರೂಪಾಯಿ ಖರ್ಚಾಗಿರುತ್ತೆ ಹಿಂದಿನ ಸ್ಟಾಮೆದಲ್ಲಿ ಡಿಟೊ ಜನರೊ ಧನಗಳೂ ಸಹಾ ಲಯವಾಯಿತು ನಮಗೆ ೩,೦೦೦ ರೂಪಾಯಿ ನಷ್ಟವಾಗಿರುತ್ತೆ.

೪ ನಮ್ಮ ಈ ಭೂಮಿ ವಿಚಾರದಲ್ಲಿ ನನ್ನಮೇಲೆ ಸರಕಾರದವರು ದುಬಾರಿ ಬಾಕಿ ಮಾಡಿ ಅದಕ್ಕಾಗಿ ನಮ್ಮ ೧೪೦-೫೬ಯೆಕರೆ ಭೂಮಿ ವಿಶಿಷ್ಟವನ್ನೂ ತಾಲ್ಲೂಕು ಸರಕಾರದವರು ನನ್ನ ಕೈಯಿ ತಪ್ಪಿಸಿ ಸರಕಾರದಲ್ಲಿ ಪಡಾಕ್ಕೆ ಸೇರಿಸಿಕೊಂಡಿರುತ್ತಾರೆ. ಈ ಕಾರಣದಿಂದ ಡಿಟೊ ಭೂಮಿಗೆ ಇದುವರಿಗೆ ನನ್ನ ಮೇಲೆ ಆಗಿರುವ ಬಾಕಿಯನ್ನ ರಿವಾರ್ಷ ಮಾಡಿಸಿಕೊಡಬೇಕು.

೫ ಡಿಟೊ ಜಮೀನು ನಮ್ಮಗೆ ಬಂದ ಬಳಿಕ ಸುಭರ್ದಿ ಸಾಗುವಳಿ ತರದೊಪ್ಪು ಮಾಡಿಕ್ಕೊಂಡು ಮುಂದಿನ ಪೊಬಲಗನ್ನ ಕ್ರಮವಾಗಿ ಸರಕಾರಕ್ಕೆ ಭಾವತಿ ಮಾಡುತ್ತೇನೆ.

ಈ ವಿಚಾರದಲ್ಲಿ ಸ್ವಾಮಿಯವರು ನ್ಯಾಯ ಪರಾಂಬರಿಕೆಯಿಂದ ಫೈಸಲು ಅಪ್ಪಣೆ ಕೊಡಸಬೇಕು.

C. ಅರ್ಜಿಯ ಷರೇ ಕಲಮಿನ ಫಿರ್ಯಾದ್ ಸಂಗತಿ.

———:o:———

ಈ ಮಾಯಿಸಮುದ್ರ ಸೆಮ್ಮತು ಹೊಣಕೆರೆ ಗ್ರಾಮದ ಸರಕಾರದ ಕೆರೆ ೭೫-೭೬ನೇ ಯಿಮವ ಸಂವತ್ಸರದಲ್ಲಿ ಒಡೆದು ಆ ಪ್ರವಾಹದಲ್ಲಿ ಅದರ ಕೆಳಗೆ ಇದ್ದ ಬಮ್ಮೇನಹಳ್ಳಿ ಗ್ರಾಮದಲ್ಲಿ ನನ್ನ ಸ್ವಂತ ಲಾಗವಡಿನ ಕೆರೆ ಕೊಚ್ಚಿ ಹೋಯಿತು. ಈ ನೀರು ವಿಶಿಷ್ಟನೂ ಈ ಕೆರೆ ಹಿಂದಿನ ಸಾಗುವಳಿ ಭೂಮಿ ಮೇಲೆ ನುಗ್ಗಿ ಸಾಗುವಳಿಗೆ ಅವಕಾಶ ವಿಲ್ಲದ ಹಾಗೆ ಹಳ್ಳಗಳನ್ನೂ ಕೊರಕಲುಗಳನ್ನೂ ಮಾಡಿತು, ಆ ಲಾಗಾಯಿತಿನಿಂದ ಈವರಿಗೂ ಸರಕಾರದ ಕೆರೆಗೆ ಬಂದ ಮಳೆ ನೀರು ಒಟ್ಟಾಗಿ ಈ ಕೆರೆ ಹಿಂದಿನ ಸಾಗುವಳಿ ಭೂಮಿ ಮೇಲೆ ನುಗ್ಗುವದ್ದರಿಂದ ಈ ಕೆರೆ ಹಿಂದೆ ಇರುವ ತರೀಭೂಮಿ ೪೫-೩೬-೭೪ ಯೆಕರೆ ಜಮೀನಿನಲ್ಲು ಮತ್ತು ಖುಷ್ಕಿ ೧೩ ಯೆಕರೆ ಭೂಮಿಯೆಲ್ಲು ಸಹಾ ಯಾವ ರೀತಿಯು ಸಾಗುವಳಿಗೂ ಆಸ್ಪದವಿಲ್ಲ, ಬಂಜರು ಬಿದ್ದು ಇರುತ್ತೆ ಈ ಜಮೀನು ಸಾಗುವಳಿಗೋಸ್ಕರವೆ ನಾನು ಮೊಪಲಿಗೆ ೪೦೦೦ ರೂಪಾಯಿ ವೆಚ್ಚಮಾಡಿ ಕಟ್ಟಿಸಿ ಇದ್ದ ನನ್ನ ಸ್ವಂತ ಕೆರೆ ಕೊಚ್ಚಿ ಹೋಯಿತು. ಈ ಕಾರಣದಿಂದ ಸರಕಾರದವರು ನನ್ನಕೆರೆಯೆನ್ನ ಕಟ್ಟಿಸಿಕೊಡಬೇಕು, ಈ ಕೆರೆಯಲ್ಲಿ ನೀರು ನಿಂತು ಸಾಗುವಳಿಗೆ ಅನುಕೂಲಪಡಿಸಿಕೊಡುವವರಿಗೂ ಈ ಕೆರೆ ಹಿಂದಿನ ತರೀಜಮೀನಿನ ಕಂದಾಯ ಪೂರಾ ಮಾಫ್ ಆಗಬೇಕೆಂತ ೭೫-೭೬ನೇ ಇಸವಿಯಲ್ಲಿ ನನ್ನ ಫಿರ್ಯಾದ್ ಆಗಿತ್ತು ಆ ವಿಷಯದಲ್ಲಿ.

೭೫-೭೬ನೇ ಯುವ. } ಈ ಎರಡು ಸಾಲುಗಳ ಪೂರಾ ಕಂದಾಯ ಆಗಲೇ ರಿಮಿಾರ್ಷ ಆಯಿತು. ಈ ಕೆರೆ
೭೬-೭೭ನೇ ಧಾತು. } ಯೆನ್ನ ಕಟ್ಟಿಸಿಕೊಡುವ ವಿಚಾರ ಆಗ್ಗೆ ಸರಕಾರದವರೆ ಚಿತ್ತಕ್ಕೆ ಒರಲಿಲ್ಲ.

೭೭-೭೮ನೇ ಈಶ್ವರ ಲಾಗಾಯಿತಿನಿಂದ ೧೩-೧೪ನೇ ಸರ್ವಜಿತುವರಿಗೆ ೧೧ ವರ್ಷಗಳಿಗೆ ನನ್ನ ಡಿಟೋ ಜಮೀನಿನ ಹಕ್ಕುದಾರಿಗೋಸ್ಕರ ಅರ್ಧ ಕಂದಾಯವನ್ನ ಸರಕಾರಕ್ಕೆ ಕೊಟ್ಟು ಇರುತ್ತೀನೆ ಬಾಕಿ ಅರ್ಧ ಕಂದಾಯ, ಜಮೀನು ಬಂಜರು ಸಬಬಿನಿಂದ ರಿಮಿಾರ್ಷ ಆಗಿ ಇರುತ್ತೆ. ಈಚಿಗೆ

೧೪-೧೫ನೇ ಸರ್ವಧಾರಿ. } ಈ ಸಾಲುಗಳಿಗೆ ಸಾಬಕಿನಂತೆ ಅರ್ಧ ಕಂದಾಯವನ್ನ ಕೊಟ್ಟಿರುತ್ತೀನೆ.
೧೫-೧೬ನೇ ವಿರೋಧಿ. }

ಈ ಬಾಕಿ ಅರ್ಧ ಕಂದಾಯ ಜಮೀನು ಬಂಜರು ಸಬಬು ರಿಮಿಾರ್ಷಗೋಸ್ಕರ ಬಾಕಿಯಲ್ಲಿ ಇರುತ್ತೆ. ಮತ್ತು ಮುಂದೆ ನಡೆಯುವ ೧೪-೧೫ನೇ ಇಸವಿ ಆಖೈರುವರಿಗೆ ಇದೇರೀತಿಯಲ್ಲಿ ನಡಿಯಬೇಕಾಗಿ ಇದ್ದೆ ಆ ವಿಚಾರದಲ್ಲಿ ಚರ್ಚಿಸಿ ಇರುತ್ತೀನೆ. ಇನ್ನೂ ಫೈಸಲ್ ಅಪ್ಪಣೆ ಆಗಿಲ್ಲ.

ಸರಕಾರದ ಕೆರೆ ಒಡದಿದ್ದರಿಂದ ನನ್ನ ಕೆರೆ ಒಡೀತು. ಅದಕ್ಕೆ ನನ್ನ ಕೆರೆಯೆನ್ನ ಕಟ್ಟಿಶಿಕೊಡಬೇಕೆಂಬು ವದನ್ನ ಸರಕಾರದವರು ಚಿತ್ತಕ್ಕೆ ತರಲಿಲ್ಲ ಅದಕ್ಕೆ ಬದಲಾಗಿ ೧೪-೧೫ನೇ ಇಸವಿಯಲ್ಲಿ ಸ್ವಾಮಿಯೆವರು ಈ ಕೆರೆ ಯೆನ್ನ ನಾನೇ ಕಟ್ಟಿಶಿಕ್ಕೊಳ್ಳವಡಕ್ಕಾಗಿ ನನಿಗೆ ಸರಕಾರದಿಂದ ೨೦೦೦ ರೂಪಾಯಿನ ತಕಾವಿ ಸಾಲ ಕೊಡಿಸು ವದಾಗಿ ೧೪೧೪ನೇ ಇಸವಿಯಲ್ಲಿ ಸ್ವಾಮಿಯೆವರ ಅಪ್ಪಣೆ ಆಯಿತು. ಆ ವಿಚಾರದಲ್ಲಿ ಶಿಕ್ಯೂರಿಟಿ ಕೇಳೋಣವಾ ಯಿತು ಅದನ್ನೂ ಕೊಟ್ಟ ಬಡ್ಡಿ ಕೊಡಲಾರೆನೆಂದು ಕೇಳಿಕ್ಕೊಂಡೆ ಆ ವಿಚಾರ ಜೆಸ್ಟ್ಲಾಸ ಮಾಡುವದರಲ್ಲಿಯೇ ವರುಷ ೧೫ಕ್ಕೆ ೧೦೦ ರೂಪಾಯಿ ಬಡ್ಡಿ ಕೊಡಣೇಕೆಂತ ಆರ್ಡರಿನಲ್ಲಿ ಸ್ವಾಮಿಯೆವರೆ ಲಿಖಿತವಾಯಿತು. ಅದರಂತೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ ತಾರೀಖು ೨೪-೧೦-೧೪ಲು ನನಿಗೆ ಡಿಟೋ ೨೦೦೦ ರೂಪಾಯಿಗಳ ತಕಾವಿ ಸಾಲ ವನ್ನ ಕೊಟ್ಟಿರು. ಅದಕ್ಕೆ ನನ್ನ ಸ್ವಂತ ಕೆರೆ ಹಿಂದೆ ಇರುವೆ ೪೫-೩೪-೭೪ ಯೆಕರೆ ಭೂಮಿಯೆನ್ನು ಕೂಣಿಗಳ್ಳು ತಾಲೂ ಕಿನೆಲ್ಲಿರುವ ಜೋಡಿ ಗ್ರಾಮವನ್ನು ಸರಕಾರಕ್ಕೆ ಆಧಾರ ಮಾಡಿರುತ್ತೀನೆ. ಈ ೨೦೦೦ ರೂಪಾಯಿ ನಿಂದಲೆ ಸ್ವಾಮಿಯವ್ವರ ಅಪ್ಪಣೆ ಪ್ರಕಾರ ನನ್ನ ಕೆರೆಗೆ ಈವರಿಗೆ ಅರ್ಧ ಕಾಮಗಾರಿ ಮಾಡಿಸಿರುತ್ತೀನೆ. ಬಾಕಿ ಕೆಲಸ ನಡೀಬೇಕಾಗಿರುತ್ತೆ ಈ ಕೆರೆ ಹಿಂದಿನ ಜಮೀನು ಶೀರಾ ಬಂಜರು ಇರುತ್ತೆ ಸಾಗುವಳಿ ಇಲ್ಲ. ಇದಕ್ಕಾಗಿ ತಾಲೂ ಕು ಡಿಪ್ಟಿ ಅಮಲ್ದಾರರ್ರಲ್ಲಿ ೧೫ನೇ ಸರ್ವಧಾರಿ ಸಾ॥ ಕ್ಕೆ ೩೬-೧೫-೦ ರೂಪಾಯಿ ೧೦ನೇ ವಿರೋಧಿ ಸಂವತ್ಸ ರಕ್ಕೆ ೩೬-೧೫-೦ ಈರೀತಿ ಕೊಟ್ಟು ಬಾಕಿ ರೂಪಾಯಿಗಳೆನ್ನ ರಿಮಿಾರ್ಷ ಚರ್ಚೆಯಲ್ಲಿ ನಿಲ್ಲಿಸಿಕೊಂಡಿದ್ದೇನೆ ಮತ್ತು ೧೪೧೫ನೇ ಇಸವಿ ವರಿಗೆ ಇದೇರೀತಿ ರಿಮಿಾರ್ಷ ಆಗಬೇಕೆಂಬ ತಕರಾರು ತಿಳಿಶಿದ್ದೇನೆ ಅದು ಸ್ವಾಮಿಯೆ ವರ ಸನ್ನಿಧಾನದಲ್ಲಿ ಬಂದ್ಮೇಪಥಾ ಫೈಸಲಾಗಬೇಕಾಗಿದೆ.

ಈ ವಿಚಾರದಲ್ಲಿ ತಾಲ್ಲೂಕಿನವರೆ ಅನ್ಯಾಯವೇನೆಂದರೆ,– ೧೪೯೯ನೇ ಸರ್ವಧಾರಿ ಸಂವತ್ಸರಕ್ಕೆ ಈ ಬೊಮ್ಮೇನ ಹಳ್ಳಿ ಕೆರೆಹಿಂದಿನ ತರೀ ಜಮೀನಿನ ಕಂದಾಯ ಬಂಜರು ಸಬಬು ಆ ವರುಷವೇ ಅರ್ಧ ಕಂದಾಯವನ್ನು ಸರಕಾರಕ್ಕೆ ಅನುಲ್ದಾರ್‌ರಲ್ಲಿ ಕೊಟ್ಟರುತ್ತೇನೆ. ಈಚೆಗೆ ೧೪೯೦ನೇ ಇಸವಿ ವಿರೋಧಿ ಸಂವತ್ಸರಕ್ಕೆ ಡಿಟೋ ಬೊಮ್ಮೇನ ಹಳ್ಳಿಯ ತರೀ ಜಮೀನು ಬಂಜರು ಸಬಬು ಗೋಸ್ಕರ ಅರ್ಧ ಕಂದಾಯಕ್ಕಾಗಿ ... ೩೪--೧೩--೦

ಮಾಯಿಸಮುದ್ರದ ಕೆರೆ ಹಿಂದಿನ ನಂಬರು ೨೦೦ನೇ ಜಮೀನಿನ ಪೂರಾ ಕಂದಾಯಕ್ಕಾಗಿ ೨೬--೦--೬

ಇವುಗಳ ರಜೀನಿ ಪತ್ರಕ್ಕಾಗಿ ೦--೦--೬

ಜುಮ್ಲಾ...೬೦--೧೪--೦

ಈ ರೀತಿಯಲ್ಲಿ ಜಮೀನು ಖುರ್ದು ಆಗುವದಕ್ಕಾಗಿ ೬೧ ರೂಪಾಯಿಗೆ ಮನಿಯೋರ್ಡರ್ ಮಾಡಿ ತುರುವೇಕೆರೆ ಡೆಪ್ಯೂಟಿ ಅನುಲ್ದಾರ್‌ರವರಿಗೆ ಕಳುಹಿಸಿದ್ದೆ. ಅವರು ಆರೀತಿ ಜಮೀನು ಖುರ್ದು ಮಾಡಿಸದೆ ತಮ್ಮ ಮನಸ್ಸು ಬಂದ ಹಾಗೆ ಬಹಳ ಗಲಾಟೆ ನಡಿಸಿರುತ್ತಾರೆ. (ಮೈಸೂರು ಸಂಸ್ಥಾನದಲ್ಲಿ ಇರುವ ಜಮೀನುದಾರರಿಗೆಲ್ಲಾ ಒಂದೇವಿಧ ನ್ಯಾಯ ವಿದ್ದಾಗ್ಯೂ) ನನಿಗೆಮಾತ್ರ ಬೇರೆ ನ್ಯಾಯೆದಿಂದ ಈ ರೀತಿ ಅನ್ಯಾಯವನ್ನ ಆಚರಿಸಿರುತ್ತಾರೆ. ಮತ್ತು ೧೪೯೦ನೇ ವಿರೋಧಿ ಸಾಲಿಗೆ ಕೊಟ್ಟರುವ ಹಣವನ್ನು ಹಿಂದೆಕ್ಕೆ ೧೪೯೯ನೇ ಸರ್ವಧಾರಿ ಸಾಲಿಗೆ ನನ್ನ ಅನುಮತಿ ಶಿವಾಯಿ ತಾವೇ ಸ್ವತಂತ್ರದಿಂದ ಜಮಾಕಟ್ಟಿಕೊಂಡು ನನ್ನ ಬದಲಾಂಗೋಸ್ಕರ ಈ ೧೦ನೇ ವಿರೋಧಿ ಸಾಲಿಗೆ ಕಂದಾಯ ಪೂರಾ ಬಾಕಿಯಲ್ಲಿ ತುಂಬಿರುತ್ತಾರೆ. ಈ ಹಣವನ್ನ ೧೫ ದಿವಸ ವಾಯಿದೆಯಲ್ಲಿ ಕೊಡದೆ ಇದ್ದರೆ ಬೆಂದಿಗಿ ಜಪ್ತಿ ಹರಾಜು ನಡಿಸುವದಕ್ಕೆ ನನಿಗೆ ತಾ॥ ೧೭-೬-೧೦ನೇ ೫೦೦ನೇ ನೋಟಿಸ್ ಕೊಟ್ಟರುತ್ತಾರೆ, ಶಿವಾಯಿ ಸರಕಾರದಿಂದ ನನಿಗೆ ತಕಾವಿ ಸಾಲ ಕೊಟ್ಟರುವ ೨೦೦೦ ರೂಪಾಯಿಗೆ ಕಳೆದ ಮಾರ್ಚಿ ವರಿಗೆ ೨೦೦ ರೂಪಾಯಿ ಕೊಡದೆ ತಪ್ಪಿರುವದರಿಂದ ೧೫ ದಿವಸ ವಾಯಿದೆಯಲ್ಲಿ ಈ ರೂಪಾಯಿ ಕೊಡದೇ ಇದ್ದರೆ ಆಧಾರದ ಸ್ವತ್ತಿನಮೇಲೆ ವಿಲೇಮಾಡಿಕೊಳ್ಳುವದಾಗಿ ತುರುವೇಕೆರೆ ಡೆ॥ ಅಮಲ್ದಾರ್‌ರವರು "ತಾ॥ ೧೦-೫-೧೦ರೆಲ್ಲು ನೋಟಿಸ್ ಕೊಟ್ಟರುತ್ತಾರೆ." ಈ ವಿಷಯದಲ್ಲಿ ಸ್ವಾಮಿ ನನ್ನಿಧಾನದಿಂದ ಅಪ್ಪಣೆ ಆಗಿರುವ ಈ ಸಮ್ಮಂಧವ ಪ್ರೊಸೀಡಿಂಗ್ಸಿನಲ್ಲಿ ಮೊದಲು ವರುಷ ೧೯೯೯ಕ್ಕೆ ನೂರು ರೂಪಾಯಿ ಕೊಡಬೇಕೆಂತ ನಮೂದಿಧೆ. ಇದಕ್ಕೆ ಬದಲಾಗಿ ೨೦೦ ರೂಪಾಯಿ ಕೊಡಬೇಕೆಂತ ನಮೂದಿಸಿ ತಗಾದೆ ನೋಟೀಸ್ ಕೊಟ್ಟರುವದು ತೀರಾ ಅನ್ಯಾಯವಾಗಿರುವ ಕಾರಣ ಈ ಸಂಗತಿ ವ್ಯವಸ್ಥೆ ಆಗುವವರಿಗೂ ಡಿಟೋ ೨೦೦ ರೂಪಾಯಿಗಳನ್ನ ಕೂಡಿಗೆಲ್ ತಾಲ್ಲೂಕು ಸರಕಾರದಲ್ಲಿ ಡಿಪಾಜಿಟ್ ಮಡಗಿರುತ್ತೇನೆ. ಅದರ ವಿಷಯದಲ್ಲಿ ನ್ಯಾಯ ವಿಚಾರಣೆಯಿಂದ ಫೈನಲ್ ಆಗಬೇಕು.

೧೪೯೯ನೇ ಇಸವಿ ನವೆಂಬರ್ ತಿಂಗಳಲ್ಲಿ ಮಾಯಿಸಮುದ್ರದ ಕೆರೆ ವಡದಾಗ್ಯೆ ಆ ಪ್ರವಾಹದಲ್ಲಿ ನನ್ನ ಚರೆ ಬೆಂದಿಗಿ ವಿಶಿಷ್ಟನ್ನೂ ಕೊಚ್ಚಿಹೋಗಿರುವದು ಸ್ವಾಮಿಯವರಿಗೆ ವರಾಂಬರಿಕೆ ಇಧೆ. ಈ ಮಾಯಿಸಮುದ್ರದಲ್ಲಿರುವ ನನ್ನ ಇತರ ಸ್ಥಿರ ಸ್ವತ್ತುಗಳೆಲ್ಲವನ್ನೂ ಸರಕಾರದವರು ಅನ್ಯಾಯೆದಿಂದ ನನ್ನ ಕೈ ತಪ್ಪಿಸಿರುತ್ತಾರೆ. ಮತ್ತು ಬೊಮ್ಮೇನಹಳ್ಳಿಯ ನನ್ನ ಕೆರೆ ಹಿಂದಿನ ೪೩ ಯಕರೆ, ೩೪ ಗುಂಟೆ, ೬೪ ಗಜ, ಭೂಮಿ ವಿಶಿಷ್ಟವನ್ನೂ ಡಿಟೋ ತಕಾವಿ ೨,೦೦೦ ರೂಪಾಯಿಗೆ ಸರಕಾರಕ್ಕೆ ಆಧಾರ ಮಾಡಿರುತ್ತೇನೆ. ಈ ಜಮೀನು ಆಬಾದು ಮಾಡಿಸುವದಕ್ಕೂ ನನ್ನ ಜೀವನಕ್ಕೆ ಮಾರ್ಗವಾಗಿ ಕೆರೆ ಕಟ್ಟಿಸುವದಕ್ಕೂ ಸರಕಾರದಿಂದ ನನಿಗೆ ೨೦೦೦ ರೂಪಾಯಿ ಸಾಲ ಬಂದು ಇಧೆ. ಈ ರೂಪಾಯಿಗಳನ್ನಾ ಡಿಟೋ ಜಮೀನಿಗೋಸ್ಕರವೆ ಖುರ್ದು ಮಾಡುತ್ತಾ ಇದ್ದೇನೆ. ಇಂಥಾ ಜಮೀನನ್ನೆ ಅನ್ಯಾಯವಾಗಿ ಸ್ಥಳದಲ್ಲಿ ತಾಲ್ಲೂಕು ಸರಕಾರದವರು ಮನಸ್ಸು ಬಂದ ಹಾಗೆಲ್ಲಾ ಪದೇಪದೆ ನೋಟೀಸುಗಳ ಕೊಟ್ಟು ಡಿಟೋ ಜಮೀನನ್ನೆ ನಾಶ ಪಡಿಸುವದರಲ್ಲಿದ್ದಾರೆ. ಮತ್ತು ಡಿಟೋ ೨೦೦೦ ರೂಪಾಯಿನ ಸಾಲಕ್ಕೆ ಆಧಾರವಾಗಿರುವ ಸ್ಥಿರ ಸ್ವತ್ತನ್ನ ರಿಮಿಷ್ಟ ಆಗತಕ್ಕೆ ಮೊಬಲಗಿಗೂ ಮತ್ತು ಹುಕುಮಿನಲ್ಲಿ ನಮೂದು ಇಲ್ಲದಿರುವ ಮೊಬಲಗಿಗೂ ನೋಟೀಸ್ ಕೊಟ್ಟು ಡಿಟೋ ಸ್ವತ್ತನ್ನ ನಾಶಪಡಿಸಿದ ಬಳಿಕ ಡಿಟೋ ೨೦೦೦ ರೂಪಾಯಿನ ಸಾಲವನ್ನು ನಾನು ಹ್ಯಾಗೆ ತೀರಿಸಲಿ, ಡಿಟೋ ಮೊಬಲಗನ್ನ ಯಾವ ಧೈರ್ಯದಿಂದ ನನ್ನ ಕೆರೆ ಕಾಮಗಾರಿ ವಗೈರೆ ಕೆಲಸಕ್ಕೆ ಉಪಯೋಗಿಸಲಿ, ನಷ್ಟಗಳಲ್ಲಿಯೂ ಕಷ್ಟಗಳಲ್ಲಿಯೂ ಮುಳಗಿರುವ ಜಮೀನುದಾರನಾದ ನನ್ನ ಅಭಿವೃದ್ಧಿಗೋಸ್ಕರ ಡಿಟೋ ತಕಾವಿ ಸಾಲ ಕೊಟ್ಟದ್ದಾಗಲಿಲ್ಲ, ಸ್ಥಳದಲ್ಲಿ ತಾಲ್ಲೂಕು ಸರಕಾರದವರು ಮನಸ್ವಿ ಕಾರು ಬಾರು ನಡಿಸುವದಕ್ಕಾಗಿ ತಕಾವಿ ಸಾಲವನ್ನ ಕೊಟ್ಟದ್ದಾಗಿರುತ್ತ.

ಈಗ ದಯವಾಳುವಾದ ಸ್ವಾಮಿಯವರನ್ನು ಬೇಡುವದೇನೆಂದರೆ:—

೧ ಸ್ಟಾರ್ಚಿನೇ ಇಸವಿಯಲ್ಲಿ ಹೊಣಕೆರೆ ಗ್ರಾಮದ ಸರಕಾರದ ಕೆರೆ ಪಡದುಹೋಗಿ ನನಿಗೆ ಭಾರಿ ನೊಬ ಲಗು ನಷ್ಟವಡಿಸುವದರಿಂದಲೂ ಡಿಟೋ ಪಡದ ಸರಕಾರದ ಕೆರೆಯ ನೀರು ಯಾವತ್ತು ನನ್ನ ಸಾಗುವಳಿಯ ಭೂಮಿ ಮೇಲೆ ನುಗ್ಗುವದರಿಂದ ೧೬ ವರುಷಗಳಿಂದಲೂ ಈ ಜಮಿನು ಬಂಜರು ಆವಾಗ್ಯೂ ಈ ಜಮಿನಿನ ಹಕ್ಕುದಾರಿ ಗೋಸ್ಕರ ಅರ್ಧ ಕಂದಾಯವನ್ನು ಸರಕಾರಕ್ಕೆ ಕೊಟ್ಟಿದ್ದೇನೆ. ಈ ಜಮಿನಿನಲ್ಲಿ ನನಿಗೆ ೧೬ ವರುಷದಿಂದ ಯಾವ ಬೆಳೆಯೂ ಆಗಿರುವದಿಲ್ಲ, ೧೯೯೩ನೇ ಇಸವಿವರಿಗೆ ನನ್ನ ಕೆರೆಯನ್ನು ಕಟ್ಟುವ ಕೆಲಸವೇ ಹಿಡಿಯುತ್ತೆ, ನಂತರ ೧೯೯೭ನೇ ಇಸವಿಯವರಿಗೆ ಈ ಜಮಿನಿನಲ್ಲಿರುವ ಹಳ್ಳ ಕೊರೆಕಲುಗಳನ್ನು ಮುಚ್ಚಿ ಸಾಗುವಳಿಗೆ ಕ್ರಮಪಡಿಸು ವದೇ ಕೆಲಸವಾಗುತ್ತೆ. ಮತ್ತು ಈ ಮಧ್ಯಕಾಲದಲ್ಲಿ ಅಲ್ಪ ಸ್ವಲ್ಪ ಜಮಿನುಗಳ ಕ್ರಮ ಪಡಿಸಿ ಸಾಗುವಳಿ ಮಾಡಿಸಿದಾಗ್ಯೂ ನನಿಗೆ ಫಲ ಸಂಪಿಸೆಲಾರದು. ಸಾಗುವಳೀದಾರ ರೈತರಿಗೆ ಕ್ರಯ ನಡಿಸಬೇಕಾಗಿರುವ ಕಾರಣ ದಿಂದ ಡಿಟೋ ೯೭ನೇ ಇಸವಿ ಆಕ್ಟೋಬರ್ ವರಿಗೆ ಈ ಜಮಿನು ಬಂಜರಿನಂತೆ ತಿಳಿಯಬೇಕಾಗಿದ್ದೇ ಶಿವಾಯಿ ೧೯೯೭ ನೇ ಇಸವಿ ಆಕ್ಟೋಬರಿನೊಳಗೆ ಡಿಟೋ ತಕಾವಿ ಹಣ ೨,೦೦೦ ರೂಪಾಯಿಗಳನ್ನು ಸರಕಾರಕ್ಕೆ ವಾಪಸು ಕೊಡಬೇ ಕಾಗಿರುವದ್ದರಿಂದ ಅದುವರಿಗೆ ಈ ಜಮಿನಿನ ಅರ್ಧ ಕಂದಾಯವನ್ನು ರಿಮಿಷ್ಟ ಕೊಡಬೇಕು.

೨ ಸರಕಾರದ ಕೆರೆ ಪಡದ್ದರಿಂದ ನನ್ನ ಕೆರೆ ಪಡೀತು. ಆದ್ದರಿಂದ ೪,೦೦೦ ರೂಪಾಯಿ ನಷ್ಟವಾಯಿತು. ಪುನಃ ಈಗ ೨,೦೦೦ ರೂಪಾಯಿನ ಖರ್ಚು ತಗಲುತ್ತೆ. ಮತ್ತು ಸರಕಾರದ ಕೆರೆಯ ನೀರು ಯಾವತ್ತೂ ನನ್ನ ಸಾಗುವಳಿ ಭೂಮಿ ಮೇಲೆ ನುಗ್ಗುವದ್ದರಿಂದ ೧೬ ವರುಷಗಳಿಂದಲೂ ಬಂಜರು ಕಂದಾಯಕ್ಕೆ ನನ್ನನ್ನ ಗುರಿ ಮಾಡಿತು. ಈ ಕಾರಣದಿಂದ ನನ್ನ ಕೆರೆಯನ್ನ ಸರಕಾರದವರು ಕಟ್ಟಿಸಿಕೊಡುವದಕ್ಕೆ ಬದಲಾಗಿ ನಾನೇ ಕಟ್ಟಿಸಿ ಕೊಳ್ಳುವದಕ್ಕೆ ನನಿಗೆ ೨,೦೦೦ ರೂಪಾಯಿ ಸಾಲ ಕೊಡಿಸೋಣವಾಯಿತು. ಈ ವಿಚಾರದಲ್ಲಿ ನನಗೆ ಯಾವ ವಿಧವಾದ ರಿಯಾಯಿತಿಯು ಆಗಿಲ್ಲ. ಆದ್ದರಿಂದ ಈ ಹಣಕ್ಕೆ ಬಡ್ಡಿ ಕೊಡಲಾರೆನೆಂತ ಮೊದಲೇ ತಿಳಿಸಿದ್ದೆ. ಅದು ವಿಚಾರ ನಡಿಯುವಷ್ಟರಲ್ಲಿ ವರುಷ ೧ಕ್ಕೆ ೧೦೦ ರೂಪಾಯಿ ಕೊಡುವಂತೆ ಸ್ವಾಮಿಯವರ ಆರ್ಡರ್ ಲಿಖಿತ ವಾಯಿತು. ಆ ಹುಕುಮಿಗೆ ಅನುಸರಿಸಿ ನಡಿಯುವದು ಕಷ್ಟವಾಗಿದೆ. ಈಗ ನಾನು ಅನೇಕ ವಿಧಗಳಾವ ನಷ್ಟಗಳಲ್ಲಿ ಮುಳಿಗಿದವನಾದ್ದರಿಂದ ನನಿಗೋಸ್ಕರ ಡಿಟೋ ಬಡ್ಡಿಯನ್ನ ತೀರಾ ಪಡಬೇಕೆಂತ ಕೇಳಲಾರೆ. ಆದ್ದರಿಂದ ಅರ್ಧ ಬಡ್ಡಿಗೆ ಖಾಯಂ ಆಗುವ ವಿಚಾರವನ್ನ ಚಿತ್ತದಲ್ಲಿ ಲಾಲಿಸಿ ಫೈಸಲು ಅಪ್ಪಣೆ ಆಗಬೇಕು.

D. ಅರ್ಜಿಯ ಠನೇ ಕಲಮಿನ ಫಿರ್ಯಾದ್ ಸಂಗತಿ.

ಕಸಬಾ ಮೌಯಿಸಮುದ್ರದ ಕೆರೇ ಹಿಂದೆ ನನ್ನ ಖಾತೆಯ ೧೫೦ನೇ ನಂಬರು ತೋಟದ ಜಮೀನು ೧೯೫ ರೂಪಾಯಿ ಕಂದಾಯವುಳ್ಳದ್ದು. ೭ ವರುಷಗಳ ಕಾಲ ಭಾರೀ ಮೊಬಲಗು ವೆಚ್ಚಾ ಮಾಡಿ ಜಮೀನ್ ಕ್ರಮ ಪಡಿಸಿ ೮ನೇ ವರುಷ ೧,೦೦೦ ಬುಡ ಬಾಳೆ ವಗೈರೆ ನೆಟ್ಟು ತೋಟವನ್ನ ಆಬಾದು ಮಾಡಿಸಿದ್ದದ್ದು, ೭೫೦ ರೂಪಾಯಿನ ಗುತ್ತಿಗ್ಯೆ ಸವಾಲು ಬಂದಿದ್ದದ್ದು, ಇದನ್ನ ನನ್ನ ಗೈರ್‌ಹಾಜರ್ ಕಾಲದಲ್ಲಿ ತುಮಕೂರು ಡಿಸ್ಟ್ರಿಕ್ಟ್ ಎಗ್ಜಿಕ್ಯೂಟಿವ್ ಇಂಜನೀಯರ್ ಮೆಸ್ಟ್ರ್ ಡಲ್ಲಾಲ್ ಸಾಹೇಬರು ನನಿಗೆ ನೋಟೀಸು ಕಂಪೆನ್ಸೇಷ್ಯ ಸಹಾ ಕೊಡಿಸದೆ ತಮ್ಮ ಸ್ವತಂತ್ರ್ಯಂದ ಡಿಟೋ ಜಮೀನ್‌ನಲ್ಲಿ ೨೦ ಸಾವಿರ ರೂಪಾಯಿನ ಮಣ್ಣು ತೆಗಿಸಿ ಕೆರೆಗೆ ಕಾಮಗಾರಿ ಮಾಡಿಸುವದಕ್ಕೆ ಆರಂಭಿಸಿದರು. ಮತ್ತು ನನ್ನ ಜಮೀನ್‌ನಲ್ಲಿಯೇ ದ್ವೇಷದಿಂದ ಮಣ್ಣು ತೆಗಿಸಿ ತೋಟದ ಜಮೀನನ್ನು ತೀರಾ ಹಳ್ಳ ಮಾಡಿಸಿದರು. ಅದಕ್ಕಾಗಿ ಕಂಪೆನ್ಸೇಷ್ಯ ಕೊಡಿಸದೆ ಡಿಟೋ ಜಮೀನಿಗೆ ಪ್ರವೇಶಿಸ ಬಾರದು ಯೆಂಬ ಬಗ್ಯೆ ಡಿಸ್ಟ್ರಿಕ್ಟಿಗೆ ಅರ್ಜೀ ಕೊಟ್ಟೆ. ಆಗ ಗುಬ್ಬೀ ತಾಲ್ಲೂಕು ಜಮಾಬಂದಿ ಕಾಲವಾಗಿತ್ತು. ಆ ವೈ ಅಲ್ಲಿ ಇದ್ದ ಡಿಪ್ಟ್ಯೀ ಕಮಿಷನರ್ ಮೆಸ್ಟರ್ ಸುಬ್ಬರಾಯರು ಗುಬ್ಬೀ ತಾಲ್ಲೂಕಿನಲ್ಲಿದ್ದ ಅಮಲ್‌ದಾರ್ ಸೈಯದ್ ಅಹಮ್ಮದ್ ಸಾಹೇಬರು ಸಹಾ ಕೂಡಿತು ನನ್ನವೇಲಿನ ಜ್ಞಿದ್ವೆಸಿಂದ ನನಿಗೆ. (ಐದು ವಿಧವಾದ ಸಂಗತಿಗಳಲ್ಲಿ ಅನ್ಯಾಯ ಮಾಡಿದರು. ಅವುಗಳನ್ನ ಸ್ವಾಮಿಯವರಿಗೆ ತಿಳಿಸುವಲ್ಲಿ ನ್ಯಾಯವಾದ ಫೈಸಲು ಅಪ್ಪಣೇ ಆಗುವದರಲ್ಲಿ ಇನ್ಸೆ.) ಅದರಲ್ಲಿ ಇದು ವಂಚಾಗಿರುತ್ತೆ.

ಈ ಜಮೀನು ಈತನ ಖಾತೆಯಲ್ಲಿ ಇದ್ದರೆ ಕಂಪೆನ್ಸೇಷ್ಯ ಕೇಳುತ್ತಾನೆ. ಅದನ್ನ ತಪ್ಪಿಸಿದರೆ ಕಂಪೆನ್ಸೇಷ್ಯ ಕೇಳುವದು ತಪ್ಪುತ್ತೆ ಎಂಬದಾಗಿ ಅಮಲ್ದಾರ್ರು ಡಿಪ್ಟ್ಯೀ ಕಮಿಷನರ್ ಸಾಹೇಬರೂ ಸಹಾ ತಪ್ಪು ಅಭಿಪ್ರಾಯದಿಂದ ನನ್ನ ೧೫೦ನೇ ನಂಬರು ಜಮೀನಿಗೆ ೧೯೫ನೇ ಇಸವಿಯಲ್ಲಿ ಅಮಲ್‌ದಾರ್ ಭೀಮರಾವ್ ಪಂತರವರು ಕ್ರಮವಾಗಿ ಮಾಡಿರುವ ಆರ್ಕರಿಗೆ ಬೇರೆ ಅಭಿಪ್ರಾಯ ಮಾಡಿಕೊಂಡು ಹಟದಿಂದ ನನ್ನ ಜಮೀನಿಗೆ ನನ್ನ ರಾಜೀನಾಮೆ ಇಲ್ಲದೆ ಖಾತೆಗೆ ಕಮ್ಮಿ ಹಾಕಿಸಿರುತ್ತಾರೆ.

ಈ ವಿಷಯದಲ್ಲಿ ನ್ಯಾಯ ಪರಾಂಬರಿಕೆಯಿಂದ ಡಿಟೋ ಜಮೀನು ನನಿಗೆ ಕೊಡಸಬೇಕು. ಅದುವರಿವಿಗೆ ನಷ್ಟಪಡಿಸಿರುವದಕ್ಕೆ ತಕ್ಕ ಕಂಪೆನ್ಸೇಷ್ಯ ಕೊಡಸಬೇಕೆಂತ ಸ್ವಾಮಿಯವರ ಸನ್ನಿಧಾನದಲ್ಲಿ ತಾರೀಖು ೪-೧೧-೪೩ ರಲ್ಲಿ ಅರ್ಜೀ ಕೊಟ್ಟೆ, ಆಗ ಈ ಜಮೀನ್ ವಿಷಯದಲ್ಲಿ ಮುಚ್ಚಳಿಕೆ ಕೊಟ್ಟಿದ್ದೀಯೋ ಯೆಂದು ದರ್ಬಾರಿನಲ್ಲಿ ಸ್ವಾಮಿಯವರು ನನ್ನನ್ನು ಕೇಳೋಣವಾಯಿತು. ಇಲ್ಲವೆಂತ ಅರಿಕೇ ಮಾಡಿದ್ದೇನೆ. ನಂತರ ರಿಕಾರ್ಡು ತರಿಸಿ ನೋಡಿ ಹುಕುಂ ಕೊಡುತ್ತೇವೆಂದು ಅಪ್ಪಣೇ ಆಯಿತು. ಮತ್ತೊಂದು ದರ್ಬಾರಿನಲ್ಲಿ ಡಿಟೋ ಜಮೀನಿಗೆ ಪುನಹಾ ದರಖಾಸ್ತು ಮಾಡಿ ತೆಗೆದುಕ್ಕೊಳ್ಳುವಂತೆ ಸ್ವಾಮಿಯವರ ಅಪ್ಪಣೆ ಆಯಿತು. ಅದರಂತೆಯೇ ಚಿಫ್ ಸೆಕ್ರಟೇರಿ ಸಾಹೇಬರವರ ಅಪ್ಪಣೆಯೂ ಆಯಿತು. ಆ ಪ್ರಕಾರ ತಾಲ್ಲೂಕಿನಲ್ಲಿ ದರಖಾಸ್ತು ಮಾಡಿದೆ. ಆ ತಾಲ್ಲೂಕಿನಲ್ಲಿಯೂ, ಡಿಸ್ಟ್ರಿಕ್ಟಿನಲ್ಲಿಯೂ ಸಹಾ ೧೯೪೧ನೇ ಇಸವಿಯಲ್ಲಿ ಡಿಪ್ಟ್ಯೀ ಕಮಿಷನರವರು ಮೆಸ್ಟರ್ ಸುಬ್ಬರಾಯರು ಅನ್ಯಾಯವಾಗಿ ಮಾಡಿ ಇದ್ದ ರಿಕಾರ್ಡನ್ನೇ ಆಗಲೂ ಅವಲಂಬಿಸಿದ್ದರಿಂದ ಸ್ವಾಮಿಯವರ ಅಪ್ಪಣೇ ಪ್ರಕಾರ ನಾನು ನೂತನವಾಗಿ ಪುನಹಾ ದರಖಾಸ್ತು ಮಾಡಿದ್ದಕ್ಕೆ ನನಿಗೆ ಸಫಲವಾಗಲಿಲ್ಲ. ಮತ್ತು ಆ ವಿಚಾರದಲ್ಲಿ ಸ್ವಾಮಿಯವರ ಸನ್ನಿಧಾನದಿಂದ ತಾರೀಖು ೧೭-೫-೪೩ } ರಲ್ಲಿ ಅಪ್ಪಣೇ ಆಗಿರುವ ೨,೨೦೫ನೇ ನಂಬರು }
೩೫-೧೧-೪೩ } ೨,೨೬೫ನೇ }
ಇಂತಾರಸು ಹುಕುಂ ತೀರಾ ಅನ್ಯಾಯವಾಗಿರುತ್ತೆ. ಆದ್ದರಿಂದ ಇದನ್ನ ಕ್ಯಾನ್ಸೆಲ್ ಮಾಡುವದಕ್ಕೂ, ನ್ಯಾಯವಾದ ಫೈಸಲು ಅಪ್ಪಣೆ ಆಗುವದಕ್ಕೂ ಈ ಕೆಳಗಿನ ಕಾರಣಗಳನ್ನ "ಸ್ವಾಮಿಯವರು ಪರಾಂಬರಿಸಬೇಕು."

೧. ಈ ಮೌಯಿಸಮುದ್ರದ ಕೆರೇ ಹಿಂದೆ ನಂಬರು ೧೫೦ನೇ ತೋಟದ ಭೂಮಿ ನನ್ನ ಸಂಸಾರಕ್ಕೆ ಆಸ್ತಿಯಾಗಿರಬೇಕೆಂತ ಅದರಲ್ಲಿ ಖಾಯಂ ಧೃವ ಬೈರಿನ ತೋಟ ಹಾಕಿಸುವದಕ್ಕೆ ಆ ಕೆರೇ ಹಿಂದಿನ ತರೀ ಅವ್ವಲ್ ರಿವಾಜಿನ ಕಂದಾಯಕ್ಕೆ ಕೊಡಸಬೇಕೆಂಬದಾಗಿಯೂ ಈ ಭೂಮಿ ಬಹಳ ದಿವಸದ ಬಂಜರು, ಅದರಲ್ಲಿ ಸಾಗು ವಳೀ ಮಾಡತಕ್ಕ ಮೆಹನತ್ತು ಹೆಚ್ಚಾಗಿರುವದ್ದರಿಂದ ಇದರ ಕಂದಾಯವನ್ನ ಕ್ರಯಕ್ಕೆ ನಡಸಬೇಕೆಂದು ತಾರೀಖು ೧೦-೪-೪೫ ರಲ್ಲಿ ದರಖಾಸ್ತು ಮಾಡಿದೆ, ಅದಕ್ಕೆ ಅನುಗುಣವಾಗಿ ಅಮಲ್‌ದಾರ್ ಭೀಮರಾವ್ ಪಂತರವರು

ತಾರೀಖು ೪--೧೦--೨೫ರಲ್ಲಿ ಆರ್ಡರು ಮಾಡಿದರು. ಅದರಲ್ಲಿ ೫ ಸಂಗತಿಗಳನ್ನ ಉದಹರಿಸಿರುತ್ತಾರೆ. ಆ ಸಂಗತಿಗಳನ್ನ ಆಗಲೇ ನನಿಗೆ ಬಯಾನಿಸಿದ್ದರಿಂದ ಅದಕ್ಕೆ ನಾನು ವಪ್ಪಿ ರುಜು ಮಾಡಿರುತ್ತೇನೆ. ಅದಕ್ಕೆ ಸ್ಥಳದ ಶಾನುಭೋಗನ ರುಜುವೂ ಆಗಿರುತ್ತೆ.

೨. ಡಿಟೋ ಆರ್ಡರು ಎಂಬ ರಿಕಾರ್ಡಿನಲ್ಲಿ ಅಮಲ್‌ದಾರ್ ಭೀಮರಾವ್ ಪಂತರು ಉದಹರಿಸಿರುವ ೫ ಸಂಗತಿಗಳು ಯೇನಂದರೆ :–

